ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಡಿಸೆಂಬರ್ 03, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 201 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999



## ಹೆಗಡೆ ನಗರದಲ್ಲಿ ಒತ್ತುವರಿ ತೆರವು ಆರಂಭ

### ಜೆಸಿಬಿ, ಟ್ರ್ಯಾಕ್ಟರ್‌ಗಳೊಂದಿಗೆ ಬಂದ ಅಧಿಕಾರಿಗಳು, ಮಾತಿನ ಚಕಮಕಿ

ದಾವಣಗೆರೆ, ನ.2- ಪಾಲಿಕೆ ವ್ಯಾಪ್ತಿಯ ರಿಂಗ್ ರಸ್ತೆಯಿಂದ ಮಾಗಾನಹಳ್ಳಿ ರಸ್ತೆಗೆ ಸೇರುವ ಹೆಗಡೆ ನಗರದಲ್ಲಿ ಒತ್ತುವರಿ ಮಾಡಿಕೊಂಡಿದ್ದ ನಿವಾಸಿಗಳ ತೆರವು ಕಾರ್ಯಾಚರಣೆ ಶನಿವಾರ ನಡೆಯಿತು.

ಬೆಳಿಗ್ಗೆಯೇ ಪೊಲೀಸರ ನೆರವಿನಿಂದ ಜೆಸಿಬಿ, ಟ್ರ್ಯಾಕ್ಟರ್‌ಗಳನ್ನು ಸ್ಥಳಕ್ಕೆ ತರಲಾಗಿತ್ತು. ಕೆಲವರು ತಾವಾಗಿಯೇ ಸಾಮಾನುಗಳನ್ನು ಹೊತ್ತೊಯ್ದರೆ ಮತ್ತೆ ಕೆಲವರು ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದ ಘಟನೆ ನಡೆಯಿತು.

ರಿಂಗ್ ರಸ್ತೆ ಒತ್ತುವರಿ ಮಾಡಿಕೊಂಡಿದ್ದರಿಂದ ರಸ್ತೆ ಅಭಿವೃದ್ಧಿ ಅಪೂರ್ಣಗೊಂಡಿತ್ತು. ಈ ಹಿನ್ನೆಲೆಯಲ್ಲಿ ದೊಡ್ಡಬಾತಿ ಬಳಿ ಇಲ್ಲಿನ ನಿವಾಸಿಗಳಿಗೆ ಜಾಗ ಖರೀದಿಸಿ ನಿವೇಶನ ನೀಡಿ, ಹಕ್ಕುಪತ್ರವನ್ನೂ ನೀಡಲಾಗಿತ್ತು. ಆದರೆ ಅಲ್ಲಿ ಮೂಲ ಸೌಲಭ್ಯಗಳಿಲ್ಲ ಎಂದು ಕೆಲವರು ಆರೋಪಿಸಿದರು. ಹಕ್ಕುಪತ್ರ ಸಿಗದವರೂ ಸಹ ತೆರವು ಕಾರ್ಯಕ್ಕೆ ವಿರೋಧ ವ್ಯಕ್ತಪಡಿಸಿದರು.

ಏಕಾಏಕಿ ಜೆಸಿಬಿಯಿಂದ ಮನೆ ಕೆಡುವುದು ಸರಿಯಲ್ಲ. ಜೆಸಿಬಿ ತಂದರೆ, ಪೊಲೀಸ್ ಕರೆಸಿದರೆ ನಾವು ಹೆದರುವುದಿಲ್ಲ ಎಂದು ಅಲ್ಲಿನ ನಿವಾಸಿಗಳು ಪಾಲಿಕೆ ಆಯುಕ್ತರಿಗೇ ತಿರುಗೇಟು ನೀಡಿದರು.

ಜೆಸಿಬಿಯಿಂದ ಮನೆಯ ವಸ್ತುಗಳು ಹಾಳಾಗುತ್ತವೆ ಎಂಬ ಮನವಿಗೆ ಸ್ಪಂದಿಸಿದ ಆಯುಕ್ತರು, ಯಂತ್ರಗಳ ಕಾರ್ಯಾಚರಣೆ ಸ್ಥಗಿತಗೊಳಿಸಿ, ಪಾಲಿಕೆ ಪೌರ ಕಾರ್ಮಿಕರ ಸಹಾಯದಿಂದ ಮನೆಗಳನ್ನು ತೆರವುಗೊಳಿಸಲು ಸೂಚಿಸಿದರು. ಭಾನುವಾರವು ತೆರವು ಕಾರ್ಯಾಚರಣೆ ಮುಂದುವರೆಯಲಿದೆ.

ತೆರವು ಕಾರ್ಯದ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ 5 ಗಂಟೆಯಿಂದ ಭಾನುವಾರ ಸಂಜೆ 5 ಗಂಟೆ ವರೆಗೆ ಸಾರ್ವಜನಿಕ ನಿಷೇಧ ಪ್ರದೇಶ ಎಂದು ಘೋಷಿಸಲಾಗಿತ್ತು. ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಎಎಸ್ಪಿ ವಿಜಯಕುಮಾರ್ ಸಂತೋಷ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ ಹಾಗೂ ಪಾಲಿಕೆ ಆಯುಕ್ತೆ ರೇಣುಕಾ ಇತರರು ತೆರವು ಕಾರ್ಯಾಚರಣೆ ವೇಳೆ ಇದ್ದರು.

## ದುರಾಸೆ ಮುಂದುವರೆದರೆ ಕ್ರಾಂತಿಯ ಅಪಾಯ

### ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಎಚ್ಚರಿಕೆ



ದಾವಣಗೆರೆ, ಡಿ. 2 – ಅಧಿಕಾರ ಹಾಗೂ ಆಸ್ತಿಯ ದುರಾಸೆಗೆ ಸಿಲುಕಿರುವ ಸಮಾಜವನ್ನು ಬದಲಾಯಿಸದೇ ಹೋದರೆ, ಕ್ರಾಂತಿಯೇ ಉಂಟಾಗಲಿದೆ. ಇಂತಹ ಕ್ರಾಂತಿಯಿಂದ ಯಾರಿಗೂ ಗೆಲುವಿಲ್ಲ ಎಂದು ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಎಚ್ಚರಿಸಿದ್ದಾರೆ.

ಜಿಲ್ಲಾ ವಕೀಲರ ಸಂಘದಿಂದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಉಪನ್ಯಾಸ ಮಾಲಿಕೆಯ ಅಂಗವಾಗಿ 'ಸಾಮಾಜಿಕ ಮೌಲ್ಯ ಮತ್ತು ಸಮಕಾಲೀನ ಸಮಾಜ' ಎಂಬ ವಿಷಯ ಕುರಿತು ಅವರು ಮಾತನಾಡಿದರು.

ದುರಾಸೆಯಿಂದಾಗಿ ಭ್ರಷ್ಟಾಚಾರ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮವಾಗುತ್ತಿದೆ. ಹೀಗೆಯೇ ಮುಂದುವರೆದರೆ ಭಾರತದ ಪರಿಸ್ಥಿತಿಯೂ ಪಕ್ಕದ ಪಾಕಿಸ್ತಾನ, ಇಲ್ಲವೇ ಶ್ರೀಲಂಕಾ ರೀತಿ ಆಗಬಹುದು ಎಂದವರು ಕಳವಳ ವ್ಯಕ್ತಪಡಿಸಿದರು.

ಈ ಹಿಂದೆ ತಪ್ಪು ಮಾಡಿದವರಿಗೆ ನ್ಯಾಯಾಲಯದ ಶಿಕ್ಷೆಯ ಜೊತೆಗೆ, ಸಮಾಜವೂ ಬಹಿಷ್ಕಾರದ ಶಿಕ್ಷೆ ವಿಧಿಸುತ್ತಿತ್ತು. ಆದರೆ, ಈಗ ಅಧಿಕಾರ ಹಾಗೂ ಶ್ರೀಮಂತರು ಏನೇ ತಪ್ಪು ಮಾಡಿದರೂ ಸಮಾಜ ಗೌರವಿಸುತ್ತಿದೆ ಎಂದವರು ವಿಷಾದಿಸಿದರು.

ಹಣ ಗಳಿಸುವ ಹಾದಿಯಲ್ಲಿ ಸಾಕಷ್ಟು ಜನರಿಗೆ ಅನ್ಯಾಯ ಆಗುತ್ತಿದೆ. ಶ್ರೀಮಂತರಾಗುವ ಆಸೆ ತಪ್ಪಲ್ಲ. ಕಾನೂನಿನ ಚೌಕಟ್ಟಿನಲ್ಲಿ ಶ್ರೀಮಂತರಾಗಬೇಕು ಎಂದವರು ಹೇಳಿದರು.

ತೃಪ್ತಿ ಹಾಗೂ ಮಾನವೀಯತೆಯ ಗುಣ ಬೆಳೆಸಿಕೊಂಡಾಗ ಮಾತ್ರ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ಈಗಿನ ಪೀಳಿಗೆಯ ಮಕ್ಕಳಲ್ಲಿ ಈ ಎರಡೂ ಒಳ್ಳೆಯ ಗುಣಗಳನ್ನು ಬೆಳೆಸಲು ಪೋಷಕರು ಮುಂದಾಗಬೇಕು ಎಂದವರು ಕರೆ ನೀಡಿದರು. (4ನೇ ಪುಟಕ್ಕೆ)

## ಆನ್‌ಲೈನ್ ವಂಚಕರಿಂದ 'ಡಿಜಿಟಲ್ ಬಂಧನ'

ನೋಯ್ಡಾ, ಡಿ. 2- ಉತ್ತರ ಪ್ರದೇಶದ ಮಹಿಳೆಯಿಂದ 11 ಲಕ್ಷ ರೂ. ದೋಚಿದ ಸೈಬರ್ ವಂಚಕರು, ಮಹಿಳೆಯನ್ನು 'ಡಿಜಿಟಲ್ ಬಂಧನ'ಕ್ಕೊಳಪಡಿಸಿದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಮಹಿಳೆಗೆ 11 ಲಕ್ಷ ರೂ.**

ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ಮಹಿಳೆಯನ್ನು ಸಂಪರ್ಕಿಸಿದ ವಂಚಕರು, ಮಹಿಳೆಯನ್ನು ಡಿಜಿಟಲ್ ಬಂಧನಕ್ಕೊಳಪಡಿಸಿದ್ದಾರೆ. ಹರಿಯಾಣದ ಫರೀದಾಬಾದ್‌ನಲ್ಲೂ ಇತ್ತೀಚೆಗೆ ಇದೇ ರೀತಿಯ ಘಟನೆ ನಡೆದು ವಾರ ಕಾಲ ಮಹಿಳೆಯರನ್ನು ಡಿಜಿಟಲ್ ಬಂಧನದಲ್ಲಿರಿಸಲಾಗಿತ್ತು.

ನೋಯ್ಡಾದ ಮಹಿಳೆ ಪೊಲೀಸರಿಗೆ ದೂರು ನೀಡಿದ್ದು, ಸಿಮ್ ವಂಚನೆ ಪ್ರಕರಣದಲ್ಲಿ ಸಿಲುಕಿರುವುದಾಗಿ ಹೇಳಿ ತಮ್ಮಿಂದ ಹಣ ಕಸಿಯಲಾಗಿದೆ ಎಂದಿದ್ದಾರೆ. ಕಳೆದ ನವೆಂಬರ್ 13ರಂದು ತಮಗೆ ಐ.ವಿ.ಆರ್. (ಇಂಟರಾಕ್ಟಿವ್ ವಾಯ್ಸ್ ರೆಸ್ಪಾನ್ಸ್) ಮೂಲಕ ಕರೆ ಬಂದಿತ್ತು. ಮುಂಬೈನಲ್ಲಿ ತನ್ನ (2ನೇ ಪುಟಕ್ಕೆ)

### ಏನಿದು ಡಿಜಿಟಲ್ ಬಂಧನ?

**ಸೈಬರ್ ಅಪರಾಧಿಗಳು ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ಅಮಾಯಕರನ್ನು ಸಂಪರ್ಕಿಸುತ್ತಾರೆ. ನೀವು ಅಪರಾಧಿಕ ಪ್ರಕರಣದಲ್ಲಿ ಸಿಲುಕಿದ್ದೀರಿ ಎಂದು ಬೆದರಿಸುತ್ತಾರೆ. ನಂತರ ಸ್ಕೈಪ್ ರೀತಿಯ ಆಪ್ ಮೂಲಕ ಆನ್‌ಲೈನ್‌ಗೆ ಬರುವಂತೆ ಹೇಳುತ್ತಾರೆ. ಇಡೀ ಪ್ರಕರಣ ಅಂತ್ಯಗೊಳ್ಳುವವರೆಗೂ ವಿಡಿಯೋ ಆಪ್‌ನಿಂದ ಹೊರ ಹೋಗಬಾರದು. ನಮ್ಮ ಕಣ್ಣೆದುರಲ್ಲೇ ಇರಬೇಕು ಎಂದು ತಿಳಿಸಲಾಗುತ್ತದೆ. ಇದನ್ನು ಡಿಜಿಟಲ್ ಬಂಧನ ಎಂದು ಕರೆಯಲಾಗುತ್ತಿದೆ.**

## ಕದನ ವಿರಾಮದ ನಂತರ ದಕ್ಷಿಣ ಗಾಜಾದಲ್ಲಿ ದಾಳಿ

ಖಾನ್ ಯೂನಿಸ್ (ಗಾಜಾ ಪಟ್ಟಿ), ಡಿ. 2 – ವಾರದ ಕದನ ವಿರಾಮದ ನಂತರ ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿ ಇಸ್ರೇಲ್ ದಾಳಿ ನಡೆಸಿದೆ. ದಕ್ಷಿಣ ಗಾಜಾದ ಖಾನ್ ಯೂನಿಸ್ ಪ್ರದೇಶವನ್ನು ಗುರಿಯಾಗಿಟ್ಟುಕೊಂಡು ದಾಳಿ ನಡೆಸಲಾಗಿದೆ. ಗಾಜಾದ ಜನರು ಉತ್ತರ ಭಾಗವನ್ನು ತೊರೆದು ದಕ್ಷಿಣಕ್ಕೆ ತೆರಳುವಂತೆ ಇಸ್ರೇಲ್ ಈ ಹಿಂದೆ ತಿಳಿಸಿತ್ತು. ಈಗ ಗಾಜಾದ ದಕ್ಷಿಣ ಭಾಗದ ಮೇಲೂ ದಾಳಿ ಆರಂಭಿಸಿದೆ. ಪ್ಯಾಲೆಸ್ತೇನಿಯರು ತನ್ನ ಜಾಗದಲ್ಲಿ ನುಸುಳಬಹುದು ಈಜಿಪ್ಟ್ ಈ ಬೆಳವಣಿಗೆ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

## ಮಕ್ಕಳಲ್ಲಿ ನೈತಿಕ ಮೌಲ್ಯಗಳ ಕೊರತೆ

### ಹೃದಯ ರೋಗ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ ಕಳವಳ



ದಾವಣಗೆರೆ, ಡಿ.2- ಮಕ್ಕಳಿಗೆ ಗೋಣಿ ಚೀಲದಲ್ಲಿ ತುಂಬಿದ ಹಾಗೆ ಮಾಹಿತಿಗಳನ್ನು ತುಂಬಲಾಗುತ್ತಿದೆಯೇ ಹೊರತು, ನೈತಿಕ ಮೌಲ್ಯಗಳ ಬಗ್ಗೆ ಹೇಳಿಕೊಡಲಾಗುತ್ತಿಲ್ಲ ಎಂದು ಹೃದಯ ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಕಳವಳ ವ್ಯಕ್ತಪಡಿಸಿದರು.

ವಿನೋಬನಗರ ಒಂದನೇ ಮುಖ್ಯರಸ್ತೆಯಲ್ಲಿನ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢ ಶಾಲೆಯ ಆವರಣದ ಶ್ರೀಮತಿ ಸುರೇಖ ವೀರಣ್ಣ ಚಿಗಟೇರಿ ಕಲಾ ಮಂದಿರದಲ್ಲಿ ನಡೆಯುತ್ತಿರುವ ಸಂಸ್ಥೆಯ 60 ನೇ ವರ್ಷದ ಸಂಭ್ರಮಾಚರಣೆ ಕಾರ್ಯ ಕ್ರಮದ ಎರಡನೇ ದಿನದ ಸಂಜೆ 'ಭವಿಷ್ಯತ್ತಿನಲ್ಲಿ-ವಿದ್ಯಾಸಂಸ್ಥೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬ್ರಿಟೀಷರು ಭಾರತಕ್ಕೆ ಬರುವ ಮುಂಚೆ ದೇಶದಲ್ಲಿ ಒಂದೂ ಕಾಲು ಲಕ್ಷ ಗುರು ಕುಲಗಳಿದ್ದವು. ಅವರು ಬಂದ ಮೇಲೆ ಗುರುಕುಲ ಪದ್ಧತಿ ಬದಲಿಸಿ ಕಾನ್ವೆಂಟ್ ಶಿಕ್ಷಣ ಜಾರಿಗೆ ತಂದರು. ಕಾನ್ವೆಂಟ್ ಶಿಕ್ಷಣದಲ್ಲಿ ಮಕ್ಕಳಿಗೆ ಸಾಕಷ್ಟು ಮಾಹಿತಿ ಸಿಗುತ್ತದೆ. ಆದರೆ ನೈತಿಕ ಮೌಲ್ಯಗಳ ಶಿಕ್ಷಣ ನೀಡುತ್ತಿಲ್ಲ ಎಂದರು.

ಗುರುಕುಲದಲ್ಲಿ ಶರೀರಕ್ಕೆ ಬುದ್ಧಿ, ಮನಸ್ಸು, ಚಿತ್ತ, ಆತ್ಮ ಐದಕ್ಕೂ ಜ್ಞಾನ ಕೊಟ್ಟು ವಿಕಸಿತ ವ್ಯಕ್ತಿಗಳನ್ನಾಗಿ ಮಾಡಿ ಸಮಾಜ ಮುಖಿ (2ನೇ ಪುಟಕ್ಕೆ)

## ಸಾಮಾಜಿಕ ನ್ಯಾಯದಲ್ಲಿ ರಾಜೀ ಇಲ್ಲ : ಸಿದ್ದರಾಮಯ್ಯ

ಬೆಂಗಳೂರು, ಡಿ. 2 - ಸಾಮಾಜಿಕ ನ್ಯಾಯ ಕಲ್ಪಿಸುವಲ್ಲಿ ರಾಜೀ ಇಲ್ಲ ಎನ್ನುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಆಯೋಗದ ವರದಿ ಅನುಷ್ಠಾನಗೊಳಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಅಖಿಲ ಕರ್ನಾಟಕ ಗಾಣಿಗರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿಂದು ಮಾತನಾಡಿದ ಅವರು, ಸಮಾಜದಲ್ಲಿ ಅವಕಾಶ ವಂಚಿತ ಜನರಿಗೆ ಶತಮಾನಗಳಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿರುವವರು, ಸಾಮಾಜಿಕ ನ್ಯಾಯದಿಂದ ಇಂದಿಗೂ ವಂಚಿತರಾದ ಜನರ ಪರವಾಗಿ ನಾವು ಇರುತ್ತೇವೆ ಎಂದರು.

ಗಾಣಿಗ ಸಮಾಜದವರು ಎಣ್ಣೆ ಉತ್ಪಾದನೆಯ ವೃತ್ತಿ ಮಾಡುತ್ತಿದ್ದವರು. ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕೀಕರಣವಾದ ನಂತರ, ಎಣ್ಣೆ ತಯಾರಿಸುವ ವೃತ್ತಿಯನ್ನು ಬಿಡಬೇಕಾದ ಪರಿಸ್ಥಿತಿ ಇದೆ. ಅನೇಕರು ಇದರಿಂದ ನಿ ರು ದ್ಯೋ ಗಿ (4ನೇ ಪುಟಕ್ಕೆ)

## ಸ್ವಾತಂತ್ರ್ಯ, ಏಕೀಕರಣಕ್ಕೆ ಹೋರಾಡಿದ ಖಂಡ್ರೆ

### ಶತಮಾನೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಬೀದರ್, ಡಿ. 2 - ಬೀದರ್ ಕರ್ನಾಟಕದಲ್ಲೆ ಉಳಿಯಲು ಭೀಮಣ್ಣ ಖಂಡ್ರೆ ಅವರ ಹೋರಾಟವೂ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶನಿವಾರ ಬೀದರ್‌ನಲ್ಲಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಮತ್ತು ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಸಮಿತಿ ಜಂಟಿಯಾಗಿ ಹಮ್ಮಿಕೊಂಡಿದ್ದ ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಇದೇ ವೇಳೆ 'ಲೋಕನಾಯಕ' ಅಭಿನಂದನಾ ಗ್ರಂಥವನ್ನು ಬಿಡುಗಡೆ ಮಾಡಿದರು.

ಕರ್ನಾಟಕ ಏಕೀಕರಣ ಚಳವಳಿಯಲ್ಲೂ ಸಕ್ರಿಯರಾಗಿ ಬೀದರ್ ಜಿಲ್ಲೆಯನ್ನು ಕರ್ನಾಟಕದಲ್ಲೇ ಉಳಿಸಿಕೊಳ್ಳಲು ರಾಜೀರಹಿತ ವಾಗಿ ಹೋರಾಟ ನಡೆಸಿದರು ಎಂದು ಸಿದ್ದರಾಮಯ್ಯ ತಿಳಿಸಿದರು.

ಮಹಾತ್ಮ ಗಾಂಧಿಯವರ ಕರೆಗೆ ಓಗೊಟ್ಟು ಭೀಮಣ್ಣ ಖಂಡ್ರೆ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಬಳಿಕ ಕರ್ನಾಟಕ ಏಕೀಕರಣ ಹೋರಾಟದಲ್ಲೂ ಭಾಗಿಯಾದರು ಎಂದರು.

ಇವರ ಹೋರಾಟದ ಹೆಜ್ಜೆಗಳು ಈ ಮಣ್ಣಿನಲ್ಲಿ ದಾಖಲಾಗಿವೆ. ಭೀಮಣ್ಣ ಖಂಡ್ರೆ ಸಮಾಜದ ಋಣ ತೀರಿಸಿ ಸಾರ್ಥಕ ಬದುಕನ್ನು ಸಾಗಿಸಿದ್ದಾರೆ (4ನೇ ಪುಟಕ್ಕೆ)

## ವೈದ್ಯಕೀಯ ಕ್ಷೇತ್ರದಲ್ಲಿ ಜ್ಞಾನ, ಕೌಶಲ್ಯ ಅಗತ್ಯ

### ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ

ದಾವಣಗೆರೆ, ಡಿ. 2 - ತಂತ್ರಜ್ಞಾನದ ಜೊತೆ ಪ್ರತಿಭೆ, ಕೌಶಲ್ಯದ ಜೊತೆ ಆಳವಾದ ಜ್ಞಾನ ಹೊಂದಿದ್ದಾಗ ಮಾತ್ರ ವೈದ್ಯಕೀಯ ಕ್ಷೇತ್ರದಲ್ಲಿ ಸುಧಾರಣೆ ಸಾಧ್ಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಕೆ.ಸಿದ್ದಪ್ಪ ಅಭಿಪ್ರಾಯಪಟ್ಟರು.

ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಹಾಗೂ ಬಾಪೂಜಿ ದಂತ ವೈದ್ಯಕೀಯ ಕಾಲೇಜು ಸಹಭಾಗಿತ್ವದಲ್ಲಿ ನಗರದ ಬಾಪೂಜಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 34ನೇ ರಾಷ್ಟ್ರಮಟ್ಟದ ಬಾಯಿ ರೋಗ ಹಾಗೂ ಕ್ಷ-ಕಿರಣ ವಿಭಾಗದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ವೈದ್ಯಕೀಯ ಕ್ಷೇತ್ರ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಹೊಸ ಹೊಸ ಔಷಧ, ಚಿಕಿತ್ಸಾ ವಿಧಾನಗಳು ಸಂಶೋಧನೆಯಾಗುತ್ತಿವೆ. ಆದಾಗ್ಯೂ ಅವುಗಳನ್ನು ಬಳಸಿಕೊಂಡು ಚಿಕಿತ್ಸೆ ಯಶಸ್ವಿಗೊಳಿಸುವುದು ಸುಲಭವಾಗಿಲ್ಲ. ಅದಕ್ಕೆ ಆಳವಾದ ಅರಿವು, ತರಬೇತಿ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇಂತಹ ವಿಚಾರ ಸಂಕಿರಣಗಳು ಸಹಕಾರಿಯಾಗಿವೆ ಎಂದರು.

ವೈದ್ಯಕೀಯ ಕ್ಷೇತ್ರದಲ್ಲಿ ಬಾಯಿ ರೋಗ ಚಿಕಿತ್ಸೆ ಹಾಗೂ ವಿಕಿರಣ ಶಾಸ್ತ್ರ ವಿಭಾಗ ಕೂಡ ಮಹತ್ವದ ಸ್ಥಾನ ಪಡೆಯುತ್ತಿದೆ. ಡಾ.ಹಚಿನ್ಸನ್ 1,200 ಸ್ವಂತ ಸಂಶೋಧನಾ ಪ್ರಬಂಧ ಬರೆಯುವ ಮೂಲಕ




### ಬೆಣ್ಣೆ ದೋಸೆ ಖ್ಯಾತಿಯಂತೆ ಇಲ್ಲಿನ ವಿದ್ಯಾರ್ಥಿಗಳು

**ದಾವಣಗೆರೆ ನಗರ ಬೆಣ್ಣೆ ದೋಸೆ ಹಾಗೂ ಶಿಕ್ಷಣ ಕ್ಷೇತ್ರ ಎರಡರಲ್ಲೂ ಹೆಸರುವಾಸಿಯಾಗಿದೆ. ರಾಜ್ಯದ ವಿವಿಧ ಭಾಗಗಳ ದಾವಣಗೆರೆ ಬೆಣ್ಣೆದೋಸೆ ಹೋಟೆಲ್‌ಗಳು ಆರಂಭವಾಗಿರುವಂತೆ, ಇಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಓದಿರುವ ವಿದ್ಯಾರ್ಥಿಗಳು ದೇಶ-ವಿದೇಶಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಈ ಸಮ್ಮೇಳನವು ಯುವ ವೈದ್ಯರನ್ನು ವೃತ್ತಿ ಪರರನ್ನಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ ವಿಶ್ವಾಸ ವ್ಯಕ್ತಪಡಿಸಿದರು.**

ವಿಭಾಗದ ಏಳಿಗೆಗೆ ಕಾರಣರಾಗಿದ್ದಾರೆ. ಬಾಯಿ ರೋಗ ಚಿಕಿತ್ಸೆ ವಿಷಯಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಇದೇ ಮಾದರಿಯಲ್ಲಿ ಯುವ ವೈದ್ಯರು ಕ್ಷೇತ್ರದ ಬೆಳವಣಿಗೆಗೆ ಕೊಡುಗೆ ನೀಡುವ ಸಂಕಲ್ಪ ಮಾಡಬೇಕು ಎಂದು ಅವರು ಕರೆ ನೀಡಿದರು.

ಇಂಡಿಯನ್ ಅಕಾಡೆಮಿ (2ನೇ ಪುಟಕ್ಕೆ)

## ಬೆಳಗಾವಿ ಅಧಿವೇಶನದಲ್ಲಿ ಜಂಟಿ ಹೋರಾಟಕ್ಕೆ ಸಿದ್ಧತೆ

ಬೆಂಗಳೂರು, ಡಿ. 2 - ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಳಗಾವಿ ಅಧಿವೇಶನದಲ್ಲಿ ಬಿಜೆಪಿ-ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸಿ ಉಭಯ ಪಕ್ಷಗಳ ಕಾರ್ಯಕರ್ತರು ಮತ್ತು ಜನತೆಗೆ ಸಂದೇಶ ನೀಡಲು ಸಿದ್ಧತೆ ನಡೆಸಿವೆ.

**ಸರ್ಕಾರದ ವಿರುದ್ಧ ವಾಗ್ದಾಳಿಗೆ ಸಿದ್ಧವಾದ ಬಿಜೆಪಿ-ಜೆಡಿಎಸ್**

ಸೋಮವಾರದಿಂದ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯಲಿರುವ ಅಧಿವೇಶನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ದಾಖಲೆಗಳ ಸಮೇತ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಉಭಯ ಪಕ್ಷಗಳು ನಿರ್ಧರಿಸಿವೆ.

ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಎಚ್. ಡಿ.ಕುಮಾರಸ್ವಾಮಿ ಹಾಗೂ ಇತರೆ ಮುಖಂಡರು ಸಭೆ ಸೇರಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಂಬಂಧ ಒಗ್ಗಟ್ಟಿನ ಹೋರಾಟ ನಡೆಸಿ ನಮ್ಮ ಮೈತ್ರಿ ಎಷ್ಟು ಗಟ್ಟಿ ಎಂಬುದನ್ನು (2ನೇ ಪುಟಕ್ಕೆ)

## ತೆಲಂಗಾಣ ಹೊಣೆ ಡಿಕೆಶಿ ಹೆಗಲಿಗೆ

ಬೆಂಗಳೂರು, ಡಿ. 2 - ತೆಲಂಗಾಣದಲ್ಲಿ ಅಧಿಕಾರ ಹಿಡಿಯತ್ತೇವೆ ಎಂಬ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್, ಅಲ್ಲಿಯ ಉಸ್ತುವಾರಿಯನ್ನು ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನಿಯೋಜಿಸಿದೆ.

ವರಿಷ್ಠರ ಆದೇಶದ ಮೇರೆಗೆ ಶಿವಕುಮಾರ್ ಹೈದರಾಬಾದ್‌ಗೆ ತೆರಳಲಿದ್ದಾರೆ, ಪಂಚರಾಜ್ಯಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ನಾಳೆ ನಡೆಯಲಿದ್ದು, ಪಕ್ಷದ ಜಯಶೀಲ ಅಭ್ಯರ್ಥಿಗಳನ್ನು ಒಂದೆಡೆ ಸೇರಿಸುವ ಹೊಣೆಯನ್ನು ಉಪಮುಖ್ಯಮಂತ್ರಿ ಅವರಿಗೆ ನೀಡಲಾಗಿದೆ. ತೆಲಂಗಾಣದಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್ (2ನೇ ಪುಟಕ್ಕೆ)

## ಅಭಿವೃದ್ಧಿ ಯೋಜನೆ ಜಾರಿ ಮಾಹಿತಿ ಕೊಡಿ ರಾಜ್ಯ ಸರ್ಕಾರಕ್ಕೆ ಬೊಮ್ಮಾಯಿ ಆಗ್ರಹ

ಬೆಂಗಳೂರು, ಡಿ. 2 - ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಲ್ಲಿ ಬಜೆಟ್‌ನಲ್ಲಿ ಘೋಷಿಸಿರುವ ಎಷ್ಟು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂಬ ಬಗ್ಗೆ ಮಾಹಿತಿ ನೀಡಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ. ಇಂದಿಲ್ಲಿ (3ನೇ ಪುಟಕ್ಕೆ)

ಮಾರಾಟಕ್ಕಿವೆ

ಸುಸಜ್ಜಿತವಾದ ಆಕರ್ಷಕ ದರದಲ್ಲಿ
ವಾಣಿಜ್ಯ ನಿವೇಶನಗಳು ಮಾರಾಟಕ್ಕಿವೆ
ಹರಿಹರ ನಗರದ ಬೈಪಾಸ್ ಹತ್ತಿರದಲ್ಲಿ ಇರುವ
ಹೆಚ್.ಎನ್. ಬಸವರಾಜ್ ಬಡಾವಣೆಯಲ್ಲಿ
ಶಿವಮೊಗ್ಗ-ಹರಿಹರ ರಾಜ್ಯ ಹೆದ್ದಾರಿಗೆ
ಹೊಂದಿಕೊಂಡಿರುವ ದೂಡಾದಿಂದ
ಅನುಮೋದಿಸಲಾಗಿರುವಂತಹ ವಾಣಿಜ್ಯ
ನಿವೇಶನಗಳು ಮಾರಾಟಕ್ಕಿವೆ.
ಬೇಕಾದವರು ಈ ಕೆಳಕಂಡ ಮೊಬೈಲ್
ಸಂಖ್ಯೆಗಳಿಗೆ ಸಂಪರ್ಕಿಸಬಹುದು

99861 48198, 89704 95290

## ಸುರಂಗದಲ್ಲಿ ಸಿಲುಕಿದಾಗ ಬಾಲ್ಯದ ಆಟಗಳೇ ಆಸರೆ

ಖಿರಾಬೇಡ, ಡಿ. 2 – ಉತ್ತರಾಖಂಡದ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದಾಗ, ಕಾಲ ಕಳೆಯಲು ಬಾಲ್ಯದ ಆಟಗಳಲ್ಲಿ ಮತ್ತೆ ತೊಡಗಿದ್ದಾಗಿ ಕಾರ್ಮಿಕ ಸುಖರಾಮ್ ಹೇಳಿದ್ದಾರೆ.

ಕೊಳವೆ ಮಾರ್ಗದಲ್ಲಿ 17 ದಿನಗಳ ಕಾಲ ಸಿಲುಕಿದ ನಂತರ ರಕ್ಷಣೆ ಸಾಧ್ಯವಾಗಿತ್ತು. ಸುಖರಾಮ್ ತಮ್ಮ ಜಾರ್ಖಂಡ್‌ನಲ್ಲಿರುವ ಖಿರಾಬೇಡ ಹಳ್ಳಿಗೆ ಮರಳಿದ ನಂತರ, ಸುರಂಗದಲ್ಲಿ ಸಮಯ ಕಳೆದ ರೀತಿಯ ಬಗ್ಗೆ ಮಾತನಾಡಿದ್ದಾರೆ. ಕಳ್ಳ ಪೊಲೀಸ್ , ರಾಜಾ ರಾಣಿ ಮುಂತಾದ ಬಾಲ್ಯದ ಆಟಗಳನ್ನೇ ಆಡಿಕೊಂಡು ಕಾಲ ಕಳೆದವು. ಸುರಂಗದಲ್ಲಿ ನಮಗೆ ಉಂಟಾದ ಹತಾಶೆ, ಅಸಹಾಯಕತೆ ಮರೆಯಲು ಬೇರೆ ದಾರಿ ಇರಲಿಲ್ಲ ಎಂದವರು ಹೇಳಿದರು.

ನಾವು ಸುರಂಗದಲ್ಲಿ ಕೆಲಸ ಮಾಡುತ್ತಿದ್ದಾಗ ಭಾರೀ ಸದ್ದು ಕೇಳಿಸಿತು. ಏನಾಯಿತು ಎಂದು ಯೋಚಿಸುವಷ್ಟರಲ್ಲೇ ಸುರಂಗದ ಒಳಗೆ ಸಿಲುಕಿದ್ದೆವು. ನಮ್ಮಲ್ಲಿ ಕೆಲವರು ನಮ್ಮ ಕಥೆ ಮುಗಿಯಿತು ಎಂದೇ ಭಾವಿಸಿದ್ದರು ಎಂದು ಸುಖರಾಮ್ ಹೇಳಿದ್ದಾರೆ.

ಕೊಳಕು ನೀರನ್ನು ಸುರಂಗದಿಂದ ಹೊರಗೆ ಕಳಿಸಲು ಬಳಸಲಾಗುತ್ತಿದ್ದ ಪೈಪ್ ಅನ್ನೇ ತುಂಡರಿಸಿ, ಆ ಮೂಲಕ ಹೊರ ಜಗತ್ತಿನ ಸಂಪರ್ಕ ಬೆಳೆಸಲು ಪ್ರಯತ್ನ ನಡೆಸಿದೆವು. ಹೊರಗಿನ ಸಂಪರ್ಕ ದೊರೆತ ನಂತರ ನಮಗೆ ಆಶಾಭಾವನೆ ಉಂಟಾಯಿತು ಎಂದವರು ಹೇಳಿದರು.

ಆರಂಭದಲ್ಲಿ ಅವಲಕ್ಕಿ, ಒಣ ದ್ರಾಕ್ಷಿ ಇತ್ಯಾದಿಗಳನ್ನು ಕಿರಿದಾದ ಕೊಳವೆ ಮೂಲಕ ಕಳಿಸಲಾಗುತ್ತಿತ್ತು. ಆದರೆ, ಇದೆಲ್ಲವೂ ಮಣ್ಣಿನಲ್ಲಿ ಬೆರೆತಿರುತ್ತಿತ್ತು. ಮರಳು ಸೋಸಲು ಇದ್ದ ಜಾಲರಿಯನ್ನೇ ಬಳಸಿ ಆಹಾರ ಸ್ವಚ್ಛಗೊಳಿಸಿಕೊಳ್ಳುತ್ತಿದ್ದೆವು.

ಕಲ್ಲುಗಳ ಸಂದಿಯಿಂದ ಬರುತ್ತಿದ್ದ ನೀರೇ ನಮಗೆ ಆರಂಭಿಕ ದಿನಗಳ ಆಸರೆಯಾಗಿತ್ತು. ಹತ್ತು ದಿನಗಳ ಕಾಲ ಇದೇ ಪರಿಸ್ಥಿತಿ ಇತ್ತು. ನಂತರದಲ್ಲಿ ದೊಡ್ಡ ಪೈಪ್ ಅಳವಡಿಸಿ ಖಿಚಡಿ, ಬಿರಿಯಾನಿ, ರೊಟ್ಟಿ, ಬಾಳೆ ಹಣ್ಣು, ಸೇಬು ಇತ್ಯಾದಿಗಳನ್ನು ಕಳಿಸಲಾಯಿತು ಎಂದು ಸುಖರಾಮ್ ಹೇಳಿದರು. ಸುರಂಗದಲ್ಲೇ ಮಲ ಬಾಧೆ ನಿವಾರಿಸಿಕೊಳ್ಳದೇ ಬೇರೆ ದಾರಿ ಇರಲಿಲ್ಲ. ಸಾಧ್ಯವಾದಷ್ಟು ದೂರಕ್ಕೆ ತೆರಳಿ, ಮಲಬಾಧೆ ನಂತರ ಮಣ್ಣು ಮುಚ್ಚಿ ಬರುತ್ತಿದ್ದೆವು ಎಂದವರು ಹೇಳಿದ್ದಾರೆ.

ನಮ್ಮ ಪ್ರಾರ್ಥನೆ ಕೊನೆಗೂ ಈಡೇರಿ ಸುರಂಗದಿಂದ ಹೊರ ಬಂದಾಗ ಸಂತೋಷಕ್ಕೆ ಪಾರವೇ ಇರಲಿಲ್ಲ ಎಂದವರು ತಿಳಿಸಿದ್ದಾರೆ. ಗ್ರಾಮದ 13 ಜನ ಸುರಂಗದ ಕಾಮಗಾರಿಗೆ ತೆರಳಿದ್ದರು. ಇವರಲ್ಲಿ ಸುಖರಾಮ್ ಜೊತೆಗೆ ರಾಜೇಂದ್ರ ಹಾಗೂ ಅನಿಲ್ ಸುರಂಗದಲ್ಲಿ ಸಿಲುಕಿದ್ದರು.

## ಎನ್ನೆಸ್ಸೆಸ್ ಶಿಬಿರಗಳಿಂದ ಹಳ್ಳಿಗಳಲ್ಲಿ ಬದಲಾವಣೆ



### ಜಿಗಳಿಯ ಎನ್ನೆಸ್ಸೆಸ್ ಶಿಬಿರ ಉದ್ಘಾಟಿಸಿದ ಶಾಸಕ ಹರೀಶ್ ಅಭಿಮತ

ಮಲೇಬೆನ್ನೂರು, ಡಿ.2- ಎನ್ನೆಸ್ಸೆಸ್ ಶಿಬಿರಗಳು ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಾಗಿದ್ದು, ಗ್ರಾಮೀಣ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿವೆ ಎಂದು ಶಾಸಕ ಬಿ.ಪಿ.ಹರೀಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು, ಶನಿವಾರ ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ 7 ದಿನಗಳ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಮಾತನಾಡಿದರು.

ಹಳ್ಳಿಗಳಲ್ಲಿ ಮೂಢನಂಬಿಕೆ ಹೋಗಲಾಡಿಸುವ ಪ್ರಯತ್ನದ ಜೊತೆಗೆ ಸ್ವಚ್ಛತೆ, ಆರೋಗ್ಯ, ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ಶಿಬಿರಾರ್ಥಿಗಳು ಶ್ರಮಿಸಬೇಕು. ಅಲ್ಲದೇ, ನೀವು ಕೂಡಾ ಹಳ್ಳಿಯ ಜನ ಜೀವನವನ್ನು ತಿಳಿದುಕೊಳ್ಳಬೇಕು. ಹಳ್ಳಿಯ ಕಲೆ, ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಹರೀಶ್ ಹೇಳಿದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ನಾನು ಅರ್ಧಮರ್ಧ ಓದಿದ್ದರಿಂದ ಜೀವನದಲ್ಲಿ ಹಿನ್ನಡೆ ಅನುಭವಿಸಿದ್ದೇನೆ. ನೀವು ಚೆನ್ನಾಗಿ ಓದಿ ತಂದೆ-ತಾಯಿಗಳಿಗೆ, ಊರಿಗೆ, ದೇಶಕ್ಕೆ ಕೀರ್ತಿ ತನ್ನಿ ಎಂದು ರಾಮಪ್ಪ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ದಾವಣಗೆರೆ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್ ಮಾತನಾಡಿ, ಬದುಕಿನಲ್ಲಿ ವಾಸ್ತವ ಅಂಶವನ್ನು ಎಂದೂ ಮರೆಯಬಾರದು. ಕನಸು ಕಾಣುವ ಈ ವಯಸ್ಸಿನಲ್ಲಿ ಕಠಿಣ ಪರಿಶ್ರಮ ಇರಬೇಕು. ಆಗ ಮಾತ್ರ ನಿಮ್ಮ ದೊಡ್ಡ ಕನಸುಗಳು ನನಸಾಗಲು ಸಾಧ್ಯ ಎಂದು ವಿದ್ಯಾರ್ಥಿಗಳ ಗಮನ ಸೆಳೆದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಎನ್ನೆಸ್ಸೆಸ್ ಸಂಯೋಜನಾಧಿಕಾರಿ ಡಾ.ಅಶೋಕ್ ಕುಮಾರ್ ವಿ.ಪಾಳೇದ್ ಮಾತನಾಡಿ, ಬೇರೆಯವರ ಜನ್ಮದಿನಗಳನ್ನು ಮಾಡುವುದನ್ನು ಬಿಟ್ಟು, ನಿಮ್ಮ ತಂದೆ-ತಾಯಿ, ಅಣ್ಣ-ತಂಗಿಯವರ ಜನ್ಮದಿನವನ್ನು ಮಾಡಿ, ಏಕೆಂದರೆ ನಮಗೆ ಜನ್ಮ ನೀಡಿದ ನಮ್ಮ ತಂದೆ-ತಾಯಿಗಳೇ ನಮಗೆ ಆದರ್ಶವಾಗಿರಬೇಕು ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ವಸಂತ್ ದೇವಾಡಿಗ, ಪತ್ರಕರ್ತ ಎಂ.ನಟರಾಜನ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಪಿ.ಹನುಮಗೌಡ, ದಾವಣಗೆರೆ ಸರ್ಕಾರಿ ಮಹಿಳಾ ಡಿಗ್ರಿ ಕಾಲೇಜಿನ ಪ್ರಾಧ್ಯಾಪಕ ಡಾ. ಟಿ.ಕರಿಬಸಪ್ಪ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಹೆಚ್. ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಜಿಗಳಿ ಶಾಲೆಯಿಂದ ಬೆಳಗಾವಿ ಜಿಲ್ಲೆಗೆ ವರ್ಗಾವಣೆಗೊಂಡಿರುವ ಶಿಕ್ಷಕಿ ದೀಪಾ ಅವರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು.

ಜಿಗಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ.ದೇವೇಂದ್ರಪ್ಪ, ಎಂ.ವಿ.ನಾಗರಾಜ್, ಹಿರಿಯರಾದ ಕೊಟ್ರಯ್ಯ, ಬಿಳಸನೂರು ಚಂದ್ರಪ್ಪ, ಕೆ.ಎಸ್.ನಂದ್ಯಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಬಿ. ಪ್ರಭಾಕರ್, ಬಾಲಕೇಂದ್ರದ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಎಕ್ಕೆಗೊಂದಿ ರುದ್ರಗೌಡ, ಎಂ.ಆರ್.ನಾಗರಾಜ್, ಟಿ.ಎಸ್.ಗದಿಗೇಶ್, ಕೆ.ಎಸ್.ಮಾಲತೇಶ್, ಶ್ರೀಮತಿ ಸುನೀತಾ ನಾಗರಾಜ್, ಉಪಾಧ್ಯಕ್ಷೆ ರೇಣುಕಮ್ಮ ನಿಂಗಪ್ಪ, ಸದಸ್ಯರಾದ ಗಂಗಾಧರಚಾರಿ, ತೆಲಗಿ ನಾಗರಾಜ್, ವಿಜಯಭಾಸ್ಕರ್, ಶಿಕ್ಷಕರಾದ ಮಲ್ಲಿಕಾರ್ಜುನ್, ಗುಡ್ಡಪ್ಪ, ಕರಿಬಸಮ್ಮ, ಜಯಶ್ರೀ, ಸಂಗೀತಾ, ಸುಮಾ, ಶಿಬಿರದ ಕಾರ್ಯಕ್ರಮಾಧಿಕಾರಿಗಳಾದ ಡಾ. ಸಿ.ಚಂದ್ರಶೇಖರ್, ಡಾ.ಬಿ.ಕೆ. ಮಂಜುನಾಥ್, ಪ್ರಾಧ್ಯಾಪಕರಾದ ಡಾ. ಮಮತಾ ಸಾಹುಕಾರ್, ಡಾ.ದಾಕ್ಷಾಯಿಣಿ ಮತ್ತಿತರರು ಭಾಗವಹಿಸಿದ್ದರು.

ಪತ್ರಕರ್ತ ಜಿಗಳಿ ಪ್ರಕಾಶ್ ಸ್ವಾಗತಿಸಿದರು. ಪ್ರಾಧ್ಯಾಪಕ ಡಾ. ಎಂ.ಕುಮಾರ್ ಕಾರ್ಯಕ್ರಮ ನಿರೂಪಿಸಿದರೆ, ಸ.ಹಿ.ಪ್ರಾ ಶಾಲೆಯ ಮುಖ್ಯ ಶಿಕ್ಷಕ ಜಿ.ನಾಗೇಶ್ ವಂದಿಸಿರು.

## ವೈದ್ಯಕೀಯ ಕ್ಷೇತ್ರದಲ್ಲಿ ಕೌಶಲ್ಯ ಅಗತ್ಯ

(1ನೇ ಪುಟದಿಂದ) ಯೋಲಜಿ ಅಧ್ಯಕ್ಷ ಡಾ.ಸತೀಶ ರೆಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಮಾತನಾಡಿದ ಅವರು ಇದೊಂದು ಅದ್ಧೂರಿ ಹಾಗೂ ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಎಂದರು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ಕೆ.ಪ್ರಶಾಂತ್ ಶೆಣೈ ಮಾತನಾಡಿ, ಸಂಸ್ಥೆಯಿಂದ ಪ್ರತಿ ಮೂರು ತಿಂಗಳಿಗೊಮ್ಮೆ ನಿಯತಕಾಲಿಕ ಹೊರತಂದು, ಕ್ಷೇತ್ರದ ಆಗುಹೋಗುಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಆಯುರ್ವೇದ, ಹೋಮಿಯೋಪಥಿ ಸೇರಿದಂತೆ ಅನ್ಯ ಚಿಕಿತ್ಸಾ ಪದ್ಧತಿಯ ಕಾಲೇಜುಗಳಲ್ಲಿ ಕಾರ್ಯಕ್ರಮ ಆಯೋಜಿಸುವ ಮೂಲಕ ರಾಷ್ಟ್ರೀಯ ಬಾಯಿರೋಗ ಚಿಕಿತ್ಸಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಪ್ರಸಾರ ಭಾರತಿಯಿಂದ ದಿನಾಚರಣೆಯ ರೇಡಿಯೋ ಸಂದೇಶ ಬಿತ್ತರಿಸಲಾಗಿದೆ. ಸದಸ್ಯತ್ವ ಅಭಿಯಾನದ ಮೂಲಕ 187 ಹೊಸ ಸದಸ್ಯತ್ವ ನೀಡಲಾಗಿದೆ. ಸಂಸ್ಥೆಯ ನಿರ್ವಹಣಾ ವೆಚ್ಚವನ್ನು ಕಡಿತಗೊಳಿಸಲಾಗಿದೆ ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ದಂತ ವೈದ್ಯರುಗಳಾದ ಡಾ.ಬಾಲಾಜಿ ರಾವ್, ಡಾ.ಸಿ.ವಿ. ಮೋಹನ್, ಡಾ.ಹೇಮಂತ್ ಉಮರ್ಜಿ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.

ದಾವಣಗೆರೆ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಪ್ರಾಂಶುಪಾಲ ಡಾ.ಐ.ಎಂ. ಅಲಿ, ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಡಿ.ಬಿ. ನಂದೀಶ್ವರ್, ಸಮ್ಮೇಳನದ ಸಂಘಟನಾ ಅಧ್ಯಕ್ಷ ಡಾ.ಎಲ್. ಅಶೋಕ್, ಡಾ.ಜಿ.ಪಿ. ಮಮತಾ, ಡಾ.ದೀಪ್ತಿ ಪಟ್ನಾಗರ್, ಡಾ. ಶೋಭಾ ಪ್ರಕಾಶ್, ಡಾ. ಗಣಪತಿ ಇತರರಿದ್ದರು. ನೀತಾ ನಿರೂಪಿಸಿದರೆ, ತ್ರಿಯಾ ಹಾಗೂ ಶ್ರೀಲಕ್ಷ್ಮಿ ಪ್ರಾರ್ಥಿಸಿದರು.

## ನಗರದಲ್ಲಿ ಇಂದು ಎಐಯುಟಿಯುಸಿ ಜಿಲ್ಲಾ ಸಮ್ಮೇಳನ

ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ವತಿಯಿಂದ ದಾವಣಗೆರೆ ಜಿಲ್ಲಾ ಸಮ್ಮೇಳನವನ್ನು ಚನ್ನಗಿರಿ ವಿರುಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ನಡೆಯಲಿದೆ.

ಬೆಳಿಗ್ಗೆ 10 ಗಂಟೆಗೆ ಜಯದೇವ ಸರ್ಕಲ್ ಬಳಿ ಎ ಐ ಯು ಟಿ ಯು ಸಿ ಸಂಘಟನೆಗೆ ಸಂಯೋಜನೆಗೊಂಡಿರುವ ಹಲವಾರು ಸಂಘಟನೆಗಳ ಹೊರಗುತ್ತಿಗೆ ನೌಕರರು, ಆಶಾ ಕಾರ್ಯಕರ್ತೆಯರು ಕಟ್ಟಡ ಕಾರ್ಮಿಕರು, ಬೀದಿಬದಿ ವ್ಯಾಪಾರಸ್ಥರು, ದುಡಿಯುವ ವರ್ಗದ ಮುಂತಾದ ನೌಕರರು ಸೇರಲಿದ್ದು, ಸರ್ಕಲ್‌ನಿಂದ ಜಾಥಾ ಮೆರವಣಿಗೆ ಹೊರಡಲಿದೆ ಎಂದು ಸಂಘಟನೆಯ ಕಾಮ್ರೇಡ್ ತಿಪ್ಪೇಸ್ವಾಮಿ ತಿಳಿಸಿದ್ದಾರೆ.

## ನೈತಿಕ ಮೌಲ್ಯಗಳ ಕೊರತೆ

(1ನೇ ಪುಟದಿಂದ) ಗಳನ್ನಾಗಿಸುತ್ತಿದ್ದರು. ಆದರೆ ಇಂದು ಕೇವಲ ಬುದ್ಧಿಗೆ ಮಾತ್ರ ಒತ್ತು ನೀಡಲಾಗುತ್ತಿದೆ. ಮಕ್ಕಳು ಎಷ್ಟೇ ವಿದ್ಯೆ ಕಲಿತರೂ ಸದಾಚಾರ, ಸದ್ವಿಚಾರ, ಸದ್ಭಕ್ತಿಯನ್ನು ಮನಸ್ಸಿನಲ್ಲಿ ತುಂಬದಿದ್ದರೆ ಅವರು 'ಎಜುಕೇಟೆಡ್' ಆಗುವುದಿಲ್ಲ ಎಂದು ಹೇಳಿದರು.

ಅಹಂಕಾರ, ಮಾನವೀಯತೆ, ಅನ್ಯಾಯ ಸೇರಿದಂತೆ ಅಸುರಿ ಸಂಪತ್ತುಗಳು ಮಕ್ಕಳ ಬಳಿ ಬಾರದಂತೆ ನೋಡಿಕೊಳ್ಳುವುದು ಹೆತ್ತವರು ಹಾಗೂ ಶಿಕ್ಷಕರ ಆದ್ಯ ಕರ್ತವ್ಯವಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳು ತಂಬಾಕು, ಮದ್ಯಪಾನ, ಡ್ರಗ್ಸ್‌ನಂತಹ ದುರಭ್ಯಾಸಗಳಿಗೆ ಬಲಿಯಾಗಿ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಎಷ್ಟೇ ಶ್ರಮ ಪಟ್ಟು ಓದಿದರೂ, ದುರಭ್ಯಾಸಗಳಿಂದ ಬದುಕು ಬರಡಾಗುತ್ತಿದೆ. ಹೀಗಾಗಿ ಮಕ್ಕಳನ್ನು ದುರಭ್ಯಾಸ, ದುಶ್ಚಗಳಿಂದ ದೂರ ಇಡಬೇಕು ಎಂದು ಸಲಹೆ ನೀಡಿದರು.

ಮಕ್ಕಳನ್ನು ಹೆಚ್ಚು ಮಾರ್ಕ್ಸ್ ತೆಗೆದುಕೊಳ್ಳುವಂತಹ ಮಾರ್ಕ್ಸ್‌ವಾದಿಗಳನ್ನಾಗಿ ಮಾಡಬೇಡಿ ಎಂದು ಕಿವಿ ಮಾತು ಹೇಳಿದ ಅವರು, ಶ್ರದ್ಧೆ, ಶ್ರಮದಿಂದ ಬದುಕಿನ ಗುರಿ ತೋರಿಸುವುದು ಗುರುಗಳ ಕರ್ತವ್ಯ ಎಂದು ಹೇಳಿದರು.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರುಗೇಂದ್ರ ವಿ. ಚಿಗಟೇರಿ ಅಧ್ಯಕ್ಷತೆ ವಹಿಸಿದ್ದರು. ಗುಡ್ ಶೆಫರ್ಡ್ ಶಾಲೆ ಅಧ್ಯಕ್ಷ ಜೆಕಬ್ ಥಾಮಸ್ ಇತರರು ಉಪಸ್ಥಿತರಿದ್ದರು. ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

## ವಂಚಕರಿಂದ 'ಡಿಜಿಟಲ್ ಬಂಧನ'

(1ನೇ ಪುಟದಿಂದ) ಆಧಾರ್ ಕಾರ್ಡ್ ಬಳಸಿ ಖರೀದಿಸಲಾದ ಸಿಮ್ ಮೂಲಕ ವಂಚನೆ ನಡೆಸಲಾಗುತ್ತಿದೆ ಹಾಗೂ ಮಹಿಳೆಯರನ್ನು ಪೀಡಿಸಲಾಗುತ್ತಿದೆ ಎಂದು ತಿಳಿಸಲಾಯಿತು ಎಂದವರು ಹೇಳಿದ್ದಾರೆ.

ನಂತರ ಆ ಕರೆಯನ್ನು ಮುಂಬೈ ಪೊಲೀಸ್ ಎಂದು ಹೇಳಿಕೊಳ್ಳುವ ವ್ಯಕ್ತಿಗೆ ವರ್ಗಾಯಿಸಲಾಯಿತು. ನನ್ನ ವಿರುದ್ಧ ಅಕ್ರಮ ಹಣದ ಆರೋಪ ಇದೆ ಹಾಗೂ ಸುಪ್ರೀಂ ಕೋರ್ಟ್‌ನಿಂದ ಬಂಧನದ ವಾರಂಟ್ ಸಹ ಇದೆ ಎಂದು ತಿಳಿಸಲಾಯಿತು.

ಸ್ಕೈಪೈ ಮೂಲಕ ಲಾಗಿನ್ ಆಗುವಂತೆ ತಿಳಿಸಲಾಗಿತ್ತು. ಅದರಂತೆ, ಆನ್‌ಲೈನ್ ಮೂಲಕ ನನ್ನ ವಿಚಾರಣೆ ನಡೆಸಿದ ವ್ಯಕ್ತಿ, ನಾನು ನಿರ್ದೋಷಿ ಎಂದು ಹೇಳಿದ. ಮುಂದಿನ ವಿಚಾರಣೆಗಾಗಿ ಸಿ.ಬಿ.ಐ. ಅಧಿಕಾರಿ ಬರಲಿದ್ದಾರೆ ಎಂದು ಹೇಳಿದ. ಬೇರೊಂದು ದೊಡ್ಡ ವಂಚನೆ ಪ್ರಕರಣದಲ್ಲಿ ನನ್ನ ಹೆಸರು ಸಿಲುಕಿದೆ. ಈ ವಿಚಾರಣೆ ಪೂರ್ಣಗೊಳಿಸಬೇಕಾದರೆ ನನ್ನ ಐ.ಸಿ.ಐ.ಸಿ.ಐ. ಖಾತೆಯಲ್ಲಿರುವ ಎಲ್ಲಾ ಹಣ ನೀಡಬೇಕೆಂದು ತಿಳಿಸಿದ. ಅದರಂತೆ ಒಟ್ಟು 11 ಲಕ್ಷ ರೂ.ಗಳನ್ನು ಆತ ಹೇಳಿದ ಖಾತೆಗೆ ವರ್ಗಾಯಿಸಿದೆ.

ಈ ವಿಷಯ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಕಾರಣ ಯಾರಿಗೂ ತಿಳಿಸಬಾರದು. ತಿಳಿಸಿದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಎಚ್ಚರಿಸಿದ್ದ ಎಂದು ಮಹಿಳೆ ತಿಳಿಸಿದ್ದಾರೆ. ಅಲ್ಲದೇ ಬೆಳಿಗ್ಗೆಯಿಂದ ರಾತ್ರಿಯವರೆಗೆ ತನ್ನನ್ನು ಡಿಜಿಟಲ್ ಬಂಧನದಲ್ಲಿರಿಸಲಾಗಿತ್ತು ಎಂದೂ ಮಹಿಳೆ ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ನೋಯ್ಡಾ ಸೈಬರ್ ಅಪರಾಧ ಠಾಣೆಯ ಇನ್ಸ್‌ಪೆಕ್ಟರ್ ರೀಟಾ ಯಾದವ್, ಆನ್‌ಲೈನ್ ವಂಚನೆಯ ಬಗ್ಗೆ ಜನರು ಎಚ್ಚರವಾಗಿರಬೇಕು. ಪೊಲೀಸರು ಎಂದೂ ಡಿಜಿಟಲ್ ಮೂಲಕ ವಿಚಾರಣೆ ನಡೆಸುವುದಿಲ್ಲ. ಯಾರಾದರೂ ಈ ರೀತಿಯ ಬೆದರಿಕೆ ಹಾಕಿದರೆ ಸೂಕ್ತ ನೋಟಿಸ್ ಕಳಿಸುವಂತೆ ತಿಳಿಸಬೇಕು ಎಂದಿದ್ದಾರೆ.

## ನಿವೃತ್ತ ನ್ಯಾಯಮೂರ್ತಿಗಳ ಬಿಗಿಮುಷ್ಠಿಯಲ್ಲಿ ಮಧ್ಯಸ್ಥಿಕೆ ವ್ಯವಸ್ಥೆ : ಉಪ ರಾಷ್ಟ್ರಪತಿ ಧನಕರ್

ನವದೆಹಲಿ, ಡಿ. 2- ನಿವೃತ್ತ ನ್ಯಾಯಮೂರ್ತಿಗಳು ದೇಶದ ಮಧ್ಯಸ್ಥಿಕೆ ವ್ಯವಸ್ಥೆಯನ್ನು ಬಿಗಿಮುಷ್ಠಿಯಲ್ಲಿಟ್ಟುಕೊಂಡಿದ್ದಾರೆ. ಇದರಿಂದಾಗಿ ಇತರೆ ಅರ್ಹರಿಗೆ ಅವಕಾಶ ಸಿಗುತ್ತಿಲ್ಲ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ವಿಷಾದಿಸಿದ್ದಾರೆ.

ಈ ದಿಸೆಯಲ್ಲಿ ಅಗತ್ಯ ಬದಲಾವಣೆ ತರಲು ಆತ್ಮಾವಲೋಕನ ಮಾಡಿಕೊಳ್ಳುವ ಕಾಲ ಬಂದಿದೆ. ಅಗತ್ಯವಾದಲ್ಲಿ ಶಾಸನವನ್ನೂ ಸಹ ರೂಪಿಸಬೇಕಿದೆ ಎಂದವರು ಹೇಳಿದ್ದಾರೆ.

ಮಧ್ಯಸ್ಥಿಕೆ ವ್ಯವಸ್ಥೆಯಲ್ಲಿ ನಿವೃತ್ತ ನ್ಯಾಯಮೂರ್ತಿಗಳು ಇಲ್ಲಿ ಹೊಂದಿರುವಷ್ಟು ಬಿಗಿ ಹಿಡಿತ ಬೇರೆ ಯಾವುದೇ ದೇಶದಲ್ಲೂ ಕಂಡು ಬರುತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

ದೇಶದ ಮಧ್ಯಸ್ಥಿಕೆ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೀಡಿರುವ ದಿಟ್ಟ ಹೇಳಿಕೆಯನ್ನು ಪ್ರಶಂಸಿಸುವುದಾಗಿಯೂ ಅವರು ತಿಳಿಸಿದ್ದಾರೆ.

ಮಧ್ಯಸ್ಥಿಕೆದಾರರ ನೇಮಕಾತಿಯಲ್ಲಿ ವೈವಿಧ್ಯತೆಯ ಕೊರತೆ ಇದೆ ಎಂದು ಚಂದ್ರಚೂಡ್ ಹೇಳಿದ್ದಾರೆ ಎಂದಿರುವ ಧನಕರ್, ಈ ವಲಯದಲ್ಲಿ ನಿವೃತ್ತ ನ್ಯಾಯಮೂರ್ತಿಗಳೇ ಹೆಚ್ಚಾಗಿದ್ದಾರೆ ಎಂದರು.

ಭಾರತ ಮಾನವ ಸಂಪನ್ಮೂಲ ಶ್ರೀಮಂತಿಕೆಗೆ ಹೆಸರಾಗಿದೆ. ಆದರೆ, ಮಧ್ಯಸ್ಥಿಕೆ ಪ್ರಕ್ರಿಯೆ ವೇಳೆ ಪ್ರತಿಭೆಗಳಿಗೆ ಅವಕಾಶ ಸಿಗುತ್ತಿಲ್ಲ. ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಧನಕರ್ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಾಲಯದ ಕಾರ್ಯಕ್ರಮದಲ್ಲಿ ಮಾತನಾಡುವಾಗ ಧನಕರ್ ತಮ್ಮ ನಿಲುವು ವ್ಯಕ್ತಪಡಿಸಿದ್ದಾರೆ. ಮಧ್ಯಸ್ಥಿಕೆ ಪ್ರಕ್ರಿಯೆಗೆ ನ್ಯಾಯಿಕ ಮಧ್ಯಪ್ರವೇಶದಿಂದ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಿದೆ. ಪ್ರಕರಣಗಳು ವಿಳಂಬವಾದಷ್ಟೂ ನ್ಯಾಯಿಕ ಸಮುದಾಯಕ್ಕೆ ಹೆಚ್ಚು ಲಾಭವಾಗುತ್ತದೆ ಎಂದೂ ಅವರು ಹೇಳಿದ್ದಾರೆ.

## ನಗರದಲ್ಲಿ ಇಂದು 'ನಾರಿ ಶಕ್ತಿ ಸಂಗಮ' ಮಹಿಳಾ ಸಮ್ಮೇಳನ

ಮಹಿಳಾ ಸಮನ್ವಯ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆ ಹಾಗೂ ಸೇವಾ ಭಾರತಿ ಟ್ರಸ್ಟ್ ಸಹಯೋಗದಲ್ಲಿ ಇಂದು ಬೆಳಿಗ್ಗೆ 8ರಿಂದ ಸಂಜೆ 4 ರವರೆಗೆ ಶ್ರೀ ಅಭಿನವ ರೇಣುಕ ಮಂದಿರದಲ್ಲಿ 'ನಾರಿ ಶಕ್ತಿ ಸಂಗಮ' ಮಹಿಳಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಮಹಿಳಾ ಸಮನ್ವಯದ ಶಿವಮೊಗ್ಗ ವಿಭಾಗದ ಸಂಚಾಲಕರಾದ ವೀಣಾ ಸತೀಶ್ ತಿಳಿಸಿದ್ದಾರೆ.

ಬೆಳಗ್ಗೆ 9.15ಕ್ಕೆ ಪ್ರದರ್ಶಿನಿಯನ್ನು ಪಿಎಸ್‌ಐ ಎಂ.ಆರ್ ಚೌಬೆ ಹಾಗೂ ಹಿರಿಯ ಸಂಗೀತ ಶಿಕ್ಷಕಿ ವಿಜಯಾ ವೆಂಕಣ್ಣ ಜೋಷಿ ನೆರವೇರಿಸುವರು. ನಂತರ 10.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಉದ್ಘಾಟಿಸುವರು.

'ಭಾರತದ ಚಿಂತನೆಯಲ್ಲಿ ಮಹಿಳೆ' ವಿಷಯ ಕುರಿತು ಮುಖ್ಯ ವಕ್ತಾರೆ ಹಾಗೂ ಬರಹಗಾರ್ತಿ ವಿಜಯಲಕ್ಷ್ಮಿ ಬಾಳೆಕುಂದ್ರಿ ಮಾತನಾಡುವರು. ಹಿರಿಯ ಪ್ರಸೂತಿ ತಜ್ಞರಾದ ಡಾ.ಶಾಂತಾ ಭಟ್ ಅಧ್ಯಕ್ಷತೆ ವಹಿಸುವರು. ಸೇವಾ ಭಾರತಿ ಟ್ರಸ್ಟ್ ಅಧ್ಯಕ್ಷ ಜಿ.ಎಸ್ ಉಮಾಪತಿ ಉಪಸ್ಥಿತರಿರುವರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಉಪನ್ಯಾಸಕರಾದ ಸುಮತಿ ಜಯಪ್ಪ ಭಾಗವಹಿಸುವರು. ರಾಷ್ಟ್ರ ಸೇವಿಕಾ ಸಮಿತಿಯ ದಕ್ಷಿಣ ಪ್ರಾಂತ ಸಹ ಬೌದ್ಧಿಕ ಪ್ರಮುಖರಾದ ಮೀನಾಕ್ಷಿ ಅಕ್ಕ ಮುಖ್ಯ ವಕ್ತಾರರಾಗಿ ಪಾಲ್ಗೊಳ್ಳುವರು. ಸಂಜೆ 4ಗಂಟೆವರೆಗೆ ಗೋಷ್ಠಿ, ಸಂವಾದ, ಚರ್ಚೆಗಳು ನಡೆಯಲಿವೆ.

ಪ್ರದರ್ಶಿನಿಯಲ್ಲಿ ಸ್ವಾತಂತ್ರ್ಯ ಪೂರ್ವ ಹೋರಾಟ ಮಾಡಿದ ವೀರ ಮಹಿಳೆಯರು ಹಾಗೂ ಸ್ವಾತಂತ್ರ್ಯಾ ನಂತರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರ ಚಿತ್ರ ಪ್ರದರ್ಶಿಸಲಾಗುವುದು. ಗೋಷ್ಠಿಯಲ್ಲಿ ಭಾರತೀಯ ಚಿಂತನೆಯಲ್ಲಿ ಮಹಿಳೆ, ಭಾರತದ ವಿಕಾಸದಲ್ಲಿ ಮಹಿಳೆ ಪಾತ್ರ ಮತ್ತು ಮಹಿಳಾ ಸುರಕ್ಷತೆ, ಸ್ವಾವಲಂಬನೆ, ಆರೋಗ್ಯ, ಶಿಕ್ಷಣ ವಿಷಯಗಳ ಬಗ್ಗೆ ವಿಷಯ ತಜ್ಞರು ಮಾತನಾಡುವರು.

## ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪುರುಷ ಸಂತಾನಹರಣ ಚಿಕಿತ್ಸಾ ಪಾಕ್ಷಿಕ



ಮಲೇಬೆನ್ನೂರು, ಡಿ.2- ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕುಟುಂಬ ಕಲ್ಯಾಣ ಯೋಜನೆಯಲ್ಲಿ ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಯ ಪಾಕ್ಷಿಕ ಕಾರ್ಯಕ್ರಮದ ಅನುಸಾರವಾಗಿ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಟಿ.ಹೆಚ್.ಓ ಡಾ.ಪ್ರಶಾಂತ್ ಉದ್ಘಾಟಿಸಿದರು.

ನಂತರ ಮಾತನಾಡಿದ ಡಾ. ಪ್ರಶಾಂತ್ ಅವರು, ಪುರುಷ ಸಂತಾನ ಹರಣ ಚಿಕಿತ್ಸೆಯು ಸುಲಭ ಹಾಗೂ ಸರಳ ಶಾಶ್ವತ ವಿಧಾನವಾಗಿದ್ದು, ಯಾವುದೇ ರೀತಿಯ ಗಾಯ, ಹೊಲಿಗೆ ಇಲ್ಲದೇ ಸರಳವಾದ ಕುಟುಂಬ ಕಲ್ಯಾಣ ಯೋಜನೆಯಾಗಿರುತ್ತದೆ.

ಪುರುಷರು ಇದರ ಮಾಹಿತಿ ಶಿಕ್ಷಣ ಪಡೆದು ಚಿಕಿತ್ಸೆ ಮಾಡಿಸಿಕೊಳ್ಳುವಂತೆ ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ನವ್ಯ ಮಾತನಾಡಿ, ರಕ್ತ ಹೀನತೆ, ತೊಡಕಿನ ತೊಂದರೆ ಇರುವಂತಹ ಮಹಿಳೆಯರು, ದೀರ್ಘಾವಧಿ ಕಾಯಿಲೆಯಿಂದ ಹಾಗೂ ಗಂಭೀರವಾದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವಂತಹ ಮಹಿಳೆಯರು ತಮ್ಮ ಸಂಗಾತಿಗೆ ಈ ಚಿಕಿತ್ಸೆಯನ್ನು ಮಾಡಿಸಬಹುದು ಎಂದು ತಿಳಿಸಿದರು.

ತಾ. ಹಿರಿಯ ಆರೋಗ್ಯ ಮೇಲ್ವಿಚಾರಕ ಎಂ. ಉಮ್ಮಣ್ಣ, ತಾ. ಆರೋಗ್ಯ ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿದರು. ಆರೋಗ್ಯ ಕೇಂದ್ರದ ನಿರೀಕ್ಷಣಾಧಿಕಾರಿ ಆದರ್ಶ ನಿರೂಪಿಸಿದರು.

## ಡಿಕೆಶಿ ಹೆಗಲಿಗೆ

(1ನೇ ಪುಟದಿಂದ) ಸಮಬಲದ ಪೈಪೋಟಿ ನೀಡಿದ್ದರೂ ಹಸ್ತವೇ ಮುಂದಿದೆ ಎನ್ನಲಾಗಿದೆ. ಒಂದು ವೇಳೆ ಅತಂತ್ರ ಸ್ಥಿತಿ ನಿರ್ಮಾಣವಾದಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಹಿಡಿದಿಡುವುದು ಮತ್ತು ಕ್ಲಿಷ್ಟ ಪರಿಸ್ಥಿತಿಯಲ್ಲಿ ಸರ್ಕಾರ ರಚನೆಗೆ ತಂತ್ರಗಾರಿಕೆ ಹೊಣೆಯನ್ನೂ ಇವರಿಗೇ ವಹಿಸಲಾಗಿದೆ.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದಿನಿಂದ ಇದೇ ದಿನಾಂಕ 7 ರವರೆಗೆ ಪ್ರತಿ ದಿನ ಬೆಳಿಗ್ಗ‘ 6 ರಿಂದ 7.30 ರವರೆಗೆ ಆಲೂರು ಕನ್‌ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ.ವಿವರಕ್ಕೆ ಸಂಪರ್ಕಿಸಿ : ಪುಷ್ಪ (9036719573) ಅರ್ಚನ (9738572311).

## ಅಧಿವೇಶನದಲ್ಲಿ ಜಂಟಿ ಹೋರಾಟಕ್ಕೆ ಸಿದ್ಧತೆ

(1ನೇ ಪುಟದಿಂದ) ಸಾಬೀತುಪಡಿಸಲು ತೀರ್ಮಾನಿಸಿವೆ.

ಮುಖ್ಯಮಂತ್ರಿ ಮತ್ತು ಸರ್ಕಾರದ ವೈಫಲ್ಯಗಳ ಬಗ್ಗೆ ಬಿಜೆಪಿ ಹೋರಾಟ ನಡೆಸಿದರೆ, ಅದಕ್ಕೆ ಜೆಡಿಎಸ್ ಉಭಯ ಸದನಗಳಲ್ಲಿ ಬೆಂಬಲವಾಗಿ ನಿಲ್ಲಲಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕೆಲವು ಸಚಿವರ ಭ್ರಷ್ಟಾಚಾರ ಹಾಗೂ ವರ್ಗಾವಣೆ ದಂಧೆಯ ಬಗ್ಗೆ ಕುಮಾರಸ್ವಾಮಿ ದಾಖಲೆ ಸಮೇತ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲಿದ್ದು ಈ ಸಂದರ್ಭದಲ್ಲಿ ಬಿಜೆಪಿ ಇವರ ಬೆಂಬಲಕ್ಕೆ ನಿಲ್ಲಲಿದೆ.

ಸರ್ಕಾರದ ವಿರುದ್ಧ ಯಾವುದೇ ವಿಷಯದಲ್ಲಿ ಉಭಯ ಪಕ್ಷಗಳು ಹೋರಾಟ ನಡೆಸಿದರೆ, ಅದಕ್ಕೆ ಒಬ್ಬರಿಗೊಬ್ಬರು ಹೆಗಲು ಕೊಟ್ಟು ಆಡಳಿತದ ವೈಫಲ್ಯವನ್ನು ಜನರ ಮುಂದಿಡಲು ತಿರ್ಮಾನಿಸಿವೆ.

ಯಾವ ಪಕ್ಷ, ಯಾವ ವಿಷಯವನ್ನು ತೆಗೆದುಕೊಂಡು ಹೋರಾಟ ಮಾಡಬೇಕು ಮತ್ತು ಅದನ್ನು ಯಾವ ಸಮಯದಲ್ಲಿ ಮಂಡಿಸಬೇಕು ಎಂಬುದನ್ನು ಕುಮಾರಸ್ವಾಮಿ ಮತ್ತು ಅಶೋಕ್ ಅವರುಗಳು ತೀರ್ಮಾನಿಸಲಿದ್ದಾರೆ.

ಕಾಂಗ್ರೆಸ್ ಸರ್ಕಾರ ಕೇವಲ ಆರು ತಿಂಗಳಲ್ಲಿ 60 ತಪ್ಪುಗಳನ್ನು ಮಾಡಿದೆ ಎಂದು ಆರೋಪಿಸುವ ಮೂಲಕ ಅಧಿವೇಶನದಲ್ಲಿ ಈ ಸಂಬಂಧ ಕಿವಿ ಹಿಂಡಲು ತೀರ್ಮಾನಿಸಿವೆ. ಬರ ಪರಿಹಾರ, ಕಾನೂನು ಸವ್ಯವಸ್ಥೆ, ಶಿಕ್ಷಣ ವ್ಯವಸ್ಥೆಯಲ್ಲಿ ರಾಜಕೀಯ, ಕಾಂತರಾಜ್ ವರದಿ, ನೀರಾವರಿ ಮತ್ತಿತರೆ ವಿಷಯಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಲು ಪಕ್ಷಗಳು ನಿರ್ಧರಿಸಿವೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ಮೊಕದ್ದಮೆಯಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದ ವಿಷಯವೂ ಪ್ರಮುಖವಾಗಿ ಪ್ರಸ್ತಾಪವಾಗಲಿದೆ.

## ನಗರದಲ್ಲಿ ಇಂದು ವಿಕಲಚೇತನರ ದಿನ

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು.


### ಪುಣಬಘಟ್ಟ ಗ್ರಾಮದ ಎಸ್.ನಿಂಗಪ್ಪ ನಿಧನ



ಹರಪನಹಳ್ಳಿ ತಾಲ್ಲೂಕು ಪುಣಬಘಟ್ಟ ಗ್ರಾಮದ ವಾಸಿಯಾದ

**ಎಸ್.ನಿಂಗಪ್ಪ ವಕೀಲರು (48)**

ಇವರು ದಿನಾಂಕ 02.12.2023ರ ಶನಿವಾರ ಸಂಜೆ 6.30ಕ್ಕೆ ಬೈಕ್ ಅಪಘಾತದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಸಹೋದರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.12.2023ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಮೃತರ ಸ್ವಗ್ರಾಮ ಹರಪನಹಳ್ಳಿ ತಾಲ್ಲೂಕು ಪುಣಬಘಟ್ಟ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕಟುಂಬ ವರ್ಗ, 94497 85064, 80959 98008**

॥ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥ ।ಶ್ರೀ ವೀರಭದ್ರೇಶ್ವರ ಪ್ರಸನ್ನ ॥

### ಗುರು-ಲಿಂಗ-ಜಂಗಮಾರಾಧನೆ ಆಹ್ವಾನ



**ಶ್ರೀ ಷ.ಬ್ರ. ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು,**
ಪುರವರ್ಗ ಹಿರೇಮಠ, ಶ್ರೀಕ್ಷೇತ್ರ, ಆವರಗೊಳ್ಳ ಇವರ ದಿವ್ಯ ಸಾನ್ನಿಧ್ಯದಲ್ಲಿ
ದಾವಣಗೆರೆ ತಾ. ಕಕ್ಕರಗೊಳ್ಳ ಗ್ರಾಮದ
ವಾಸಿ ಕಕ್ಕರಗೊಳ್ಳ ಮಠದ
**ಶ್ರೀಮತಿ ಕೆ.ಎಂ. ಯಶೋಧಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿ. 29.11.2023ನೇ ಬುಧವಾರ ಬೆಳಗಿನ
ಜಾವ ನನ್ನ ಪೂಜ್ಯ ಪತಿಯವರಾದ

**ಶ್ರೀ ವೇ. ಕೆ.ಎಂ. ಮುರುಗೇಂದ್ರಯ್ಯನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ


**ಗುರು-ಲಿಂಗ-ಜಂಗಮಾರಾಧನೆಯನ್ನು**

**ದಿನಾಂಕ : 3.12.2023ನೇ ಭಾನುವಾರ ಬೆಳಿಗ್ಗೆ 11ಕ್ಕೆ ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀಮತಿ ಕೆ.ಎಂ. ಯಶೋಧಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕಕ್ಕರಗೊಳ್ಳ ಮಠದ ವಂಶಸ್ಥರು, ಗ್ರಾಮಸ್ಥರು ಹಾಗೂ ಬಂದು-ಮಿತ್ರರು.**


ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### ಶಿವಣ್ಣ ಮಲ್ಲಪ್ಪ ಬಳ್ಳಾರಿ ನಿಧನ




ರಾಣೇಬೆನ್ನೂರು ವಾಸಿ ಶಿವಣ್ಣ ಮಲ್ಲಪ್ಪ ಬಳ್ಳಾರಿ (ವ್ಯಾಪಾರಸ್ಥರು) (74) ಇವರು ದಿನಾಂಕ 02.12.2023 ಶನಿವಾರ ಮಧ್ಯಾಹ್ನ 2.35ಕ್ಕೆ ನಿಧನರಾದರು. ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.12.2023ರ ಭಾನುವಾರ ಬೆಳಿಗ್ಗೆ 11ಕ್ಕೆ ರಾಣೇಬೆನ್ನೂರಿನ ದೇವರಗುಡ್ಡ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ತರಳಬಾಳು ನಗರ ಬಿ. ಕೆ. ಶಿವಕುಮಾರ್ ನಿಧನ




ದಾವಣಗೆರೆ ತಾಲ್ಲೂಕು ತರಳಬಾಳು ನಗರ (6ನೇ ಕಲ್ಲು) ಗ್ರಾಮದ ವಾಸಿ ದಿ॥ ಕಬ್ಬಳದ ಜಗದೇವಪ್ಪ ಇವರ ಪುತ್ರ ಬಿ. ಕೆ. ಶಿವಕುಮಾರ್ (63) ಇವರು 02.12.2023ರ ಶನಿವಾರ ಬೆಳಗಿನ ಜಾವ 01 ಗಂಟೆಗೆ ನಿಧನರಾದರು. ಮೃತರು ಧರ್ಮಪತ್ನಿ ಶ್ರೀಮತಿ ಸುಧಾ ಮತ್ತು ಮಕ್ಕಳು ಹಾಗೂ ಅಪಾರ ಬಂದು ಮಿತ್ರರನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 02.12.2023 ಶನಿವಾರ ತರಳಬಾಳು ನಗರ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿತು.

### ಮುಂಡರಗಿ ನಟರಾಜಪ್ಪ ನಿಧನ



ದಾವಣಗೆರೆ ಹಳೇ ಆರ್‌ಟಿಓ ಆಫೀಸ್ ಎದುರು ವಾಸಿ ಮುಂಡರಗಿ ನಟರಾಜಪ್ಪ (81) ಇವರು ದಿನಾಂಕ 02.12.2023ರ ಶನಿವಾರ ಮಧಾಹ್ನ 3 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂದು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.12.2023ರ ಭಾನುವಾರ 12 ಗಂಟೆಗೆ ನಗರದ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

### ಬಿ. ವಾಸು ನಿಧನ



ದಾವಣಗೆರೆ ದೇವರಾಜ್ ಕ್ವಾಟ್ರಸ್, ಗಿರಿ ಟಾಕೀಸ್ ಹತ್ತಿರದ ವಾಸಿ ಬಿ. ವಾಸು (72) ಇವರು ದಿನಾಂಕ 02.12.2023ರ ಶನಿವಾರ ಬೆಳಿಗ್ಗೆ 11 ಕ್ಕೆ ನಿಧನರಾದರು. ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಗ್ರ ಹಾಗೂ ಅಪಾರ ಬಂದು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.12.2023ರ ಭಾನುವಾರ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಇಂದು ನಾಲ್ಕು ರಾಜ್ಯಗಳ ಚುನಾವಣಾ ಫಲಿತಾಂಶ**
ನವದೆಹಲಿ : ನಾಲ್ಕು ರಾಜ್ಯಗಳಿಗೆ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶ ಇಂದು ಹೊರ ಬೀಳಲಿದೆ. ಮಧ್ಯ ಪ್ರದೇಶ, ರಾಜಸ್ಥಾನ, ಛತ್ತೀಸ್‌ಘಡ ಹಾಗೂ ತೆಲಂಗಾಣಗಳ ಫಲಿತಾಂಶ ಪ್ರಕಟವಾಗಲಿದೆ. ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೆ ಇದು ಸೆಮಿಫೈನಲ್ ಎಂದೇ ಬಣ್ಣಿಸಲಾಗುತ್ತಿದೆ.

**ಕತಾರ್ ಆಡಳಿತಗಾರನ ಭೇಟಿ ಮಾಡಿದ ಪ್ರಧಾನಿ**
ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕತಾರ್‌ನ ಆಡಳಿತಗಾರ ಅಮೀರ್ ಶೇಖ್ ತಮೀಮ್ ಬಿನ್ ಹಮ್ ಅಲ್ - ಥಾನಿ ಅವರನ್ನು ಭೇಟಿ ಮಾಡಿದ್ದಾರೆ. ದುಬೈನಲ್ಲಿ ನಡೆಯುತ್ತಿರುವ ಸಿ.ಒ.ಪಿ. 28 ಶೃಂಗಸಭೆ ವೇಳೆ ಈ ಭೇಟಿ ನಡೆದಿದೆ. ಈ ಸಂದರ್ಭದಲ್ಲಿ ದ್ವಿಪಕ್ಷೀಯ ವಿಷಯಗಳ ಕುರಿತು ಚರ್ಚಿಸಲಾಗಿದೆ.

**ಸಂವಿಧಾನ ರಚನಾ ಸಭೆಯ ಸದಸ್ಯರಂತೆ ವರ್ತಿಸಲು ಕರೆ**
ನವದೆಹಲಿ : ಸಂವಿಧಾನ ರಚನಾ ಸದನದ ಸದಸ್ಯರು ಚರ್ಚೆ ನಡೆಸುವಾಗ ಕಲಾಪಕ್ಕೆ ಅಡ್ಡಿ ಪಡಿಸುವ ಘಟನೆಗಳು ನಡೆಯುತ್ತಲೇ ಇರಲಿಲ್ಲ. ಇದೇ ರೀತಿಯ ವರ್ತನೆಯನ್ನು ಮುಂಬರುವ ಸಂಸತ್ ಅಧಿವೇಶನದಲ್ಲೂ ಸಂಸದರು ಪ್ರದರ್ಶಿಸಬೇಕು ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಕರೆ ನೀಡಿದ್ದಾರೆ.

**ನೌಕಾ ದಳದ ಪ್ರದರ್ಶನ ವೀಕ್ಷಿಸಲಿರುವ ಪ್ರಧಾನಿ**
ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೋಮವಾರ ಮಹಾರಾಷ್ಟ್ರದ ಸಿಂಧು ದುರ್ಗದ ತರ್ಕರ್ಲಿ ಕಡಲ ತೀರದಲ್ಲಿ ನೌಕಾ ದಳದ ಕಾರ್ಯಾಚರಣೆ ಪ್ರದರ್ಶನವನ್ನು ವೀಕ್ಷಿಸಲಿದ್ದಾರೆ. ಈ ಪ್ರದರ್ಶನದಲ್ಲಿ ಹಡಗು, ಸಬ್ ಮರೀನ್, ವಿಮಾನ ಹಾಗೂ ವಿಶೇಷ ಪಡೆಗಳು ಭಾಗಿಯಾಗಲಿವೆ.

**ಸಂಜಯ್ ಸಿಂಗ್ ವಿರುದ್ಧ ಆರೋಪ ಪಟ್ಟಿ**
ನವದೆಹಲಿ : ದೆಹಲಿ ಅಬಕಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಆಮ್ ಆದ್ಮಿ ಪಾರ್ಟಿ ಸಂಸದ ಸಂಜಯ್ ಸಿಂಗ್ ವಿರುದ್ಧ ಆರೋಪ ಪಟ್ಟಿ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಯು.ಜಿ.ಸಿ.ಯ ಸೆಲ್ಫಿ ತಾಣಗಳಿಗೆ ಆಕ್ಷೇಪ**
ನವದೆಹಲಿ : ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳು ದೇಶದ ಬೆಳವಣಿಗೆಯನ್ನು ಬಿಂಬಿಸುವ ಸೆಲ್ಫಿ ತಾಣಗಳನ್ನು ರೂಪಿಸಬೇಕೆಂದು ಯು.ಜಿ.ಸಿ. ಸೂಚನೆ ನೀಡಿರುವುದನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕುಸಿಯುತ್ತಿರುವ ವರ್ಚಸ್ಸು ಉಳಿಸಿಕೊಳ್ಳಲು ಪ್ರಧಾನ ಮಂತ್ರಿ ಈ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿದೆ.

**ಮೊದಲ ಗಗನಯಾನಕ್ಕೆ ಯಾತ್ರಿಗಳು ಸಿದ್ಧ**
ಗಾಂಧಿನಗರ : ಭಾರತದ ಮೊದಲ ಮಾನವ ಗಗನಯಾನದ ಯಾತ್ರಿಗಳು ಸಿದ್ಧರಾಗಿದ್ದಾರೆ. 2025ರಲ್ಲಿ ಈ ಯಾನ ನಡೆಯುವುದನ್ನು ಕಾಯುತ್ತಿದ್ದಾರೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

**ಇಂದು ರೂಪುಗೊಳ್ಳಲಿರುವ ಚಂಡಮಾರುತ**
ಚೆನ್ನೈ : ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ಭಾನುವಾರ ಚಂಡಮಾರುತವಾಗಿ ಪರಿವರ್ತನೆಯಾಗಲಿದೆ. ಇದರಿಂದ ತಮಿಳುನಾಡಿನ ಉತ್ತರ ಕರಾವಳಿ ಹಾಗೂ ಒಳನಾಡಿನಲ್ಲಿ ಧಾರಾಕಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

**ದಶಕದ ಅಂತ್ಯದಲ್ಲಿ ವಿದ್ಯುತ್ ಬೇಡಿಕೆ ದುಪ್ಪಟ್ಟು : ಮುಕೇಶ್ ಅಂಬಾನಿ**
ಗಾಂಧಿನಗರ : ಭಾರತ ಈಗ ವಿಶ್ವದ ಮೂರನೇ ಅತಿ ದೊಡ್ಡ ವಿದ್ಯುತ್ ಬಳಕೆ ದೇಶವಾಗಿದೆ. ಈ ದಶಕದ ಅಂತ್ಯದಲ್ಲಿ ಅಭೂತಪೂರ್ವ ಆರ್ಥಿಕ ಬೆಳವಣಿಗೆಯಾಗಲಿದೆ. ಇದರಿಂದ ವಿದ್ಯುತ್ ಬೇಡಿಕೆ ಎರಡು ಪಟ್ಟು ಹೆಚ್ಚಾಗಲಿದೆ ಎಂದು ಉದ್ಯಮಿ ಮುಕೇಶ್ ಅಂಬಾನಿ ಹೇಳಿದ್ದಾರೆ.

**ಪಾಕ್ ಉಗ್ರವಾದಿ ದಾಳಿಯಲ್ಲಿ ಎಂಟು ಜನರ ಸಾವು**
ಪೇಷಾವರ : ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್ ಬಾಲ್ಟಿಸ್ತಾನ ಪ್ರಾಂತ್ಯದಲ್ಲಿ ಪ್ರಯಾಣಿಕರ ಬಸ್ ಮೇಲೆ ಉಗ್ರರು ಗುಂಡು ಹಾರಿಸಿದ್ದು, ಎಂಟು ಜನ ಸಾವನ್ನಪ್ಪಿದ್ದಾರೆ ಹಾಗೂ 26 ಜನ ಗಾಯಗೊಂಡಿದ್ದಾರೆ. ಸಂಜೆ 6.30ರ ವೇಳೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ನಾರಿ ಶಕ್ತಿ ಸಂಗಮ - ನವ ಚೈತನ್ಯದ ಉಗಮ



ಮಹಿಳೆ, ಹೆಂಗಸು, ಸ್ತ್ರೀ ಎಂದು ಕರೆಯಲ್ಪಡುವ ನಾರಿಗೆ, ಅನಾದಿ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಒಂದು ವಿಶಿಷ್ಟ ಸ್ಥಾನಮಾನ. ಒಂದು ಹೆಣ್ಣು ಮಗು ಮಗಳಾಗಿ, ಸಹೋದರಿಯಾಗಿ, ಮಡದಿಯಾಗಿ, ಸೊಸೆಯಾಗಿ, ತಾಯಿಯಾಗಿ ಹೀಗೆ ಜೀವನದಲ್ಲಿ ಕುಟುಂಬದ ಬೇರೆ ಬೇರೆ ಆಯಾಮಗಳಲ್ಲಿ ಪ್ರೀತಿ, ಪ್ರೇಮ ಹಾಗೂ ವಾತ್ಸಲ್ಯಗಳ ಸುಧೆಯನ್ನೇ ಹರಿಸುತ್ತಾಳೆ. ಇನ್ನು ಪುರಾಣಗಳಲ್ಲಿ ನೋಡಿದರೆ ಬ್ರಹ್ಮಾಂಡದ ಉಗಮದ ಮೂಲ ಶಕ್ತಿಯೇ ಆದಿ ಮಾಯೆ.

ಈಕೆಯೇ ತ್ರಿಮೂರ್ತಿಗಳ ಮಾತೆ ಎನ್ನುವುದು ನಿತ್ಯಸತ್ಯ. ಅಂದರೆ ಈ ಜೀವನ ಚೈತನ್ಯದ ಉಗಮವೇ ಈಕೆಯ ಗರ್ಭ.

ಇದರಿಂದಲೇ ನಮ್ಮ ಭೂಮಿಯನ್ನು ಮಾತೆಗೆ ಹೋಲಿಸಿ, ಎಲ್ಲದರಲ್ಲೂ, ಎಲ್ಲರಲ್ಲೂ ವಾತ್ಸಲ್ಯ ಮಯಿ ತಾಯಿ ರೂಪವನ್ನೇ ಕಂಡು ಎಲ್ಲವನ್ನೂ ಮಾತೆ ಎಂದು ವಾಚಿಸುವುದು ನಮ್ಮ ಭವ್ಯ ಭಾರತ ಸಂಸ್ಕೃತಿಯ ಒಂದು ಪರಿ. ಅಂತೆಯೇ ನಾರಿಯೇ ಇಚ್ಛಾ ಶಕ್ತಿ , ಜ್ಞಾನ ಶಕ್ತಿ ಹಾಗೂ ಕ್ರಿಯಾ ಶಕ್ತಿಗಳ ಆಗರ. ಇವುಗಳ ಪ್ರಮಾಣ ಒಬ್ಬೊಬ್ಬರಲ್ಲೂ ಬೇರೆ ಬೇರೆಯಾಗಿರುತ್ತದೆ ವಿನಃ ಯಾರೂ ಶಕ್ತಿ ರಹಿತ ರಾಗಿರುವುದಿಲ್ಲ. ಅದಕ್ಕೆ ನಮ್ಮ ಸುಭಾಷಿತದಲ್ಲಿ "ಗೃಹಿಣಿ ಗೃಹಮುಚ್ಯತೇ "ಎಂದು ವರ್ಣಿಸಿದ್ದಾರೆ. ಅಂದರೆ ಒಂದು ಕಟ್ಟಡ ಗೃಹ ಅನಿಸಬೇಕಾದರೆ ಅಲ್ಲಿ ಗೃಹಿಣಿ ಇರಬೇಕು. ಅದೇ ರೀತಿ ನಮ್ಮ ಸಂಸ್ಕೃತಿಯಲ್ಲಿ ಧರ್ಮಪತ್ನಿಯ ಬಗ್ಗೆ ಹೇಳುವಾಗ

**ಕಾರ್ಯೇಷು ದಾಸಿ, ಕರಣೇಷು ಮಂತ್ರಿ;**
**ಭೋಜೇಷು ಮಾತಾ, ಶಯನೇಷು ರಂಭ;**
**ರೂಪೇಷು ಲಕ್ಷ್ಮಿ, ಕ್ಷಮಯೇಷು ಧರಿತ್ರಿ**

ಸತ್ಕರ್ಮ ನಾರಿ, ಎಂದು ಒಂದು ಸ್ತ್ರೀ ಯ ಎಲ್ಲ ದಕ್ಷತೆಗಳ ಬಗ್ಗೆ ನಮಗೆ ಅರಿವು ಮೂಡಿಸುತ್ತದೆ.

ಅನಾದಿ ಕಾಲದಿಂದಲೂ ಪುರಾಣದಲ್ಲಿ ಲಕ್ಷ್ಮಿ, ಸರಸ್ವತಿ, ಪಾರ್ವತಿಯರಿಂದ ಹಿಡಿದು ಗಾಯತ್ರಿ, ಕಾಳಿ, ದುರ್ಗೆ ಹೀಗೆ ವಿವಿಧ ಶಕ್ತಿಗಳ ದೇವತೆಗಳು ಹೆಣ್ಣಿನ ರೂಪವೇ. ಇನ್ನು ಐತಿಹಾಸಿಕವಾಗಿ ನೋಡಿ ದರೂ ರೂಪದಲ್ಲಿ, ವಿದ್ಯೆಯಲ್ಲಿ, ಶೌರ್ಯದಲ್ಲಿ, ಆಡಳಿತದಲ್ಲಿ ಸೈ ಅನಿಸಿಕೊಂಡೇ ಬಂದಿರುವುದು ಮಹಿಳೆ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರ ತೀಯ ನಾರಿ ಹೇಗಿದ್ದಾಳೆ? ಎಂಬ ಒಂದು ಚಿತ್ರಣ ಮುಂದಿಡೋಣ.

ನಾರಿ, 'ಶಕ್ತಿ ಸ್ವರೂಪಿಣಿ' ಎಂದು ವರ್ಣಿಸಿರು ವುದು ನಮ್ಮ ಹಿಂದೂ ಸನಾತನ ಸಂಸ್ಕೃತಿಯಲ್ಲಿ ಮಾತ್ರ. ವಿವಿಧತೆಯಲ್ಲಿ ಏಕತೆ ಕಾಣುವ ನಮ್ಮ ಭಾರತ ದಲ್ಲಿಯ ವಿವಿಧ ಭಾಷೆ ವೇಷ ಭೂಷಣ, ಸಂಪ್ರದಾಯ ,ಆಹಾರ ವಿಹಾರವಿದ್ದರೂ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ನಮ್ಮ ಜೀವನ ಮೌಲ್ಯ, ಭವ್ಯ ಪರಂಪರೆಯನ್ನು ಜಗತ್ತಿಗೇ ತೋರಿಸಬೇಕಿದೆ. ಭಗವದ್ಗೀತೆ, ವಚನ ಪುರಾಣಗಳಲ್ಲಿನ ಅಧ್ಯಾತ್ಮಿಕ ಚಿಂತನೆ, ವೇದ, ಉಪನಿಷತ್ತು, ವಚನ ಹಾಗೂ ಸರ್ವಜ್ಞನ ವಚನಗಳಲ್ಲಿ ಅಡಗಿರುವ ವೈಜ್ಞಾನಿಕತೆ, ಊಹೆಗೆ ನಿಲುಕದ ಅಗಾಧ ಜ್ಞಾನ ವೈಶಿಷ್ಟ್ಯತೆಗಳನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಾರಿಯರಾದ ನಮ್ಮೆಲ್ಲರ

**ನಗರದಲ್ಲಿ ಇಂದು**
**'ನಾರಿ ಶಕ್ತಿ ಸಂಗಮ'**
**ಮಹಿಳಾ ಸಮ್ಮೇಳನ**

ಕರ್ತವ್ಯವಾಗಿದೆ. ಮನೆಯೇ ಮೊದಲ ಪಾಠ ಶಾಲೆ ತಾಯಿಯೇ ಮೊದಲ ಗುರು, ಒಲಿದರೆ ನಾರಿ ಮುನಿದರೆ ಮಾರಿ, ನಾರಿ ವಜ್ರದಂತೆ ಕಠೋರ ಆದರೆ ಕುಸುಮದಷ್ಟೇ ಕೋಮಲ ಅನ್ನುವ ಈ ನಾಣ್ಣುಡಿಗಳೆಲ್ಲ ಕಟುಸತ್ಯ. ಆಕೆಯ ಮನಸ್ಸನ್ನು ಅರ್ಥ ಮಾಡಿಕೊಂಡ ಒಂದು ಕುಟುಂಬ ಸಕಲ ಸೌಭಾಗ್ಯ ಗಳನ್ನು ಪಡೆಯುವುದು.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, ತೊಟ್ಟಿಲು ತೂಗುವ ಕೈಗಳು ದೇಶವನ್ನು ಅಳ ಬಲ್ಲವು. ಈ ಎಲ್ಲ ನಾಣ್ನುಡಿಗಳು ಈ ನಾರಿಯ ಜ್ಞಾನದ, ಆಕೆಯ ನಾಯಕತ್ವದ ಆಳವನ್ನು ತೋರಿ ಸುತ್ತದೆ. ಒಟ್ಟಿನಲ್ಲಿ ಇಷ್ಟೆಲ್ಲ ಗುಣ ಸಾಮರ್ಥ್ಯಗಳನ್ನು ಹೊಂದಿರುವ ಮಹಿಳೆ ಭೂಮಿಯಿಂದ ಅಂತರಿಕ್ಷದವರೆಗೆ, ವೈದ್ಯಕೀಯ, ತಾಂತ್ರಿಕ ಶೈಕ್ಷಣಿಕ ರಾಜಕೀಯ ಸಂಗೀತ ನೃತ್ಯ ಸಾಹಿತ್ಯ ಅಲ್ಲದೆ ಅಂತರಿಕ್ಷದಲ್ಲಿಯೂ ತನ್ನ ಸಾಧನೆ ಮೆರೆದಿದ್ದಾಳೆ.

ಆದರೆ ಈ ತರಹ ಸಾಧನೆ ಮಾಡಿದ ಸ್ತ್ರೀಯರ ಸಂಖ್ಯೆ 3 ರಿಂದ 5 ಪ್ರತಿ ಶತ ಮಾತ್ರ ಎಂದರೆ ತಪ್ಪಾಗಲಾರದು. ನಮ್ಮ ದೇಶದಲ್ಲಿ ಇಂದಿಗೂ ನಮ್ಮ ಸುತ್ತ ಮುತ್ತಲೇ ಇರುವ ಎಷ್ಟೊಂದು ಮಹಿಳೆಯರು ದೌರ್ಜನ್ಯ, ಶೋಷಣೆಗಳಿಗೆ ಬಲಿಯಾಗುತ್ತಾ ಬಂದಿದ್ದಾರೆ. ಬಡತನ ಶಿಕ್ಷಣದ ಕೊರತೆ, ಅಂಧಾನುಕರಣೆ, ಮೂಢನಂಬಿಕೆಗಳು, ಎಲ್ಲಕ್ಕಿಂತ ಹೆಚ್ಚಾಗಿ ಅನಾ ರೋಗ್ಯ ಆಹಾರ. ಅಪೌಷ್ಟಿಕತೆ ಜೀವನ ಹೈರಾಣಾಗಿಸಿದೆ.

ಇದಕ್ಕೆ ಪೂರಕ ಎನ್ನುವಂತೆ ಅವರ ದೌರ್ಬಲ್ಯ ಗಳನ್ನು ಅರಿತು ಅವರಿಗೆ ಆಸೆ ಆಮಿಷಗಳನ್ನು ಒಡ್ಡಿ, ತಪ್ಪು ದಾರಿಗೆ ಎಳೆಯುವ ದುಷ್ಟ ಶಕ್ತಿಗಳು ನೂರಾರು ನಮ್ಮ ಸುತ್ತಲೂ ಹರಡಿವೆ. ಇನ್ನೊಂದೆಡೆ ಆರ್ಥಿಕ ವಾಗಿ ಮುಂದಿದ್ದರೂ ಸಂಸ್ಕಾರದ ಕೊರತೆಯಿಂದ ಜೀವನ ಮೌಲ್ಯಗಳನ್ನು ಕಳೆದು ಕೊಂಡು, ಜೀವನೋತ್ಸಾಹವಿಲ್ಲದೆ, ದುಶ್ಚಟಗಳಿಗೆ ಬಲಿಯಾಗುತ್ತಿರುವ ಯುವ ಸ್ತ್ರೀ ಸಮೂಹ ಇನ್ನೊಂದು. ಈ ಪುರಾತನ ಆಧುನಿಕ ಎನ್ನುವ ಎರಡು ದ್ವಂದ್ವಗಳ ನಡುವೆ ಸಿಲುಕಿರುವ ಗುಂಪು ಮಗದೊಂದು.

ಒಂದು ಹೆಣ್ಣು ಕುಟುಂಬದ ಕಣ್ಣು, ಒಂದು ಸುಸಂಸ್ಕೃತ ಕುಟುಂಬ ಒಂದು ಆರೋಗ್ಯಕರ ಸಮಾಜದ ಬುನಾದಿಯಾ ಗಬಲ್ಲದು. ಒಂದು ಸ್ವಸ್ಥ ಹಾಗೂ ಸುಸಂಸ್ಕೃತ ಸಮಾಜ ಮಾತ್ರವೇ ಒಂದು ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಅಡಿಪಾಯ. ಇಂತಹ ಸದೃಢ ರಾಷ್ಟ್ರ ಮಾತ್ರವೇ ವಿಶ್ವ ಗುರುವಾಗಿ ವಸುದೈವ ಕುಟುಂಬಕಮ್ ಎಂಬ ಶಾಂತಿ ಮಂತ್ರದಿಂದ ಜಗತ್ತನ್ನು ಮುನ್ನಡೆಸುವುದು. ಈ ಶಕ್ತಿ ಇರುವುದು ಮಾತೃತ್ವ ಸೆಲೆ ಇರುವ ನಾರಿ ಶಕ್ತಿಗೆ ಮಾತ್ರವೇ.

ಇಂತಹ ನಾರಿಯರ ಶಕ್ತಿಗಳು ಸಂಗಮ ವಾದರೆ? ಈ ಶಕ್ತಿಯ ಸಂಗಮ ಎಲ್ಲ ನಾರಿಮಣಿಗಳ ಉನ್ನತ ಚಿಂತನೆಗಳಿಂದ. ಭಾರತೀಯ ಚಿಂತನೆ ಯಲ್ಲಿ ಮಹಿಳೆ, ಈಗಿನ ಪರಿಸ್ಥಿತಿಯಲ್ಲಿ ಗ್ರಾಮಾಂತರ ಹಾಗೂ ನಗರ ಪ್ರದೇಶದ ಮಹಿಳೆಯರ ಸವಾಲು ಗಳೇನು? ಅದಕ್ಕೆ ಪರಿಹಾರಗಳೇನು? ನಮ್ಮೆಲ್ಲರ ಕನಸಾಗಿರುವ ವಿಶ್ವ ಗುರು ಭವ್ಯ ಭಾರತದ ವಿಕಾಸದಲ್ಲಿ ನಾರಿಯರ ಪಾತ್ರವೇನು? ಇಂತಹ ಚಿಂತನ ಮಂಥನ ಕಾರ್ಯವನ್ನು ಒಂದೇ ಚಿತ್ತ ದಿಂದ ಎಲ್ಲ ನಾರಿಯರು ಸೇರಿ ಮಾಡಬೇಕಿದೆ. ಬನ್ನಿ ಸಹೋದರಿಯರೇ ಇದೇ ಬರುವ ಡಿಸೆಂಬರ್ 3 ರೇಣುಕಾ ಮಂದಿರದಲ್ಲಿ ನಡೆಯುವ ನಾರಿ ಶಕ್ತಿ ಸಂಗಮಕ್ಕೆ ಸೇರೋಣ ನವ ಚೈತನ್ಯದ ಉಗಮಕ್ಕೆ ನಾಂದಿ ಹಾಡಿ ಪೂಜನೀಯ ಭಾರತ ಮಾತೆಯ ಮುಡಿಯ ಕೀರ್ತಿ ಕಿರೀಟವನ್ನು ಭದ್ರವಾಗಿಸಲು ಕಂಕಣ ತೊಡೋಣ. ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ ಎಂಬ ಮಾತನ್ನು ಸತ್ಯವಾಗಿಸೋಣ.

**- ಡಾ. ಆರತಿ ಸುಂದರೇಶ್**, ದಾವಣಗೆರೆ.

# ಡಬ್ಲ್ಯೂ.ಹೆಚ್.ಓ. ಸ್ವಾತಂತ್ರ್ಯ ಸಂಪೂರ್ಣ ಕಳೆದುಕೊಂಡಿದೆ : ಅದರ ಸಲಹೆಗಳನ್ನು ಕಡೆಗಣಿಸುವಂತೆ ಡಾ. ಅಸೀಮ್ ಮಲ್ಹೋತ್ರ ಕರೆ

ನವದೆಹಲಿ, ಡಿ. 2 – ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂ.ಹೆಚ್.ಒ.) ತನ್ನ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ. ಭಾರತ ಸರ್ಕಾರ ಡಬ್ಲ್ಯೂ.ಹೆಚ್.ಒ. ಸಲಹೆಗಳನ್ನು ಕಡೆಗಣಿಸಬೇಕು ಹಾಗೂ ಸಂಘಟನೆಯಿಂದ ಹೊರ ಬರಬೇಕು ಎಂದು ಹಿರಿಯ ಭಾರತೀಯ – ಬ್ರಿಟಿಷ್ ಹೃದ್ರೋಗ ಪರಿಣಿತ ಡಾ. ಅಸೀಮ್ ಮಲ್ಹೋತ್ರ ಸಲಹೆ ನೀಡಿದ್ದಾರೆ.

ಖಾಸಗಿ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿರುವ ಅವರು, ಡಬ್ಲ್ಯೂ.ಹೆಚ್.ಒ.ದ ಶೇ.70ರಷ್ಟು ಅನುದಾನ ವಾಣಿಜ್ಯ ಸಂಸ್ಥೆಗಳಿಂದ ಬರುತ್ತಿದೆ. ಕೈಗಾರಿಕೆ ಇಲ್ಲವೇ ಸ್ವಹಿತಾಸಕ್ತರಿಂದ ಅದು ಹಣ ಪಡೆಯುವವರೆಗೂ ಸ್ವತಂತ್ರ ಎಂದು ಭಾವಿಸಲಾಗದು ಎಂದಿದ್ದಾರೆ.

ಭಾರತ ಸರ್ಕಾರ ಡಬ್ಲ್ಯೂ.ಹೆಚ್.ಒ. ಸಲಹೆಗಳನ್ನು ಕಡೆಗಣಿಸಬೇಕು. ಈ ವಾಣಿಜ್ಯ ಸಂಸ್ಥೆಗಳು ನಮ್ಮ ಆರೋಗ್ಯದ ಹಿತದಲ್ಲಿಲ್ಲ. ಅವರು ವಂಚನಾತ್ಮಕವಾಗಿ ಹಣ ಗಳಿಸುತ್ತಿವೆ ಎಂದು ಮಲ್ಹೋತ್ರ ಹೇಳಿದ್ದಾರೆ.

ಡಬ್ಲ್ಯೂ.ಹೆಚ್.ಒ.ಗೆ ಸ್ವತಂತ್ರವಾಗಿ ಅನುದಾನ ಕಲ್ಪಿಸಬೇಕು. ಇಲ್ಲವಾದರೆ ಅದರ ಸಲಹೆಯ ಮೇಲೆ ಸರ್ಕಾರ, ವೈದ್ಯರು ಹಾಗೂ ಸಾರ್ವಜನಿಕರಿಗೆ ವಿಶ್ವಾಸ ಹುಟ್ಟುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ವೈದ್ಯಕೀಯ ಜ್ಞಾನವು ವಾಣಿಜ್ಯ ನಿಯಂತ್ರಣದಲ್ಲಿದೆ. ಆದರೆ, ಈ ಬಗ್ಗೆ ಬಹಳಷ್ಟು ವೈದ್ಯರಿಗೆ ತಿಳಿದಿಲ್ಲ. ದೊಡ್ಡ ಫಾರ್ಮಾ ಕಂಪನಿಗಳು ತಮ್ಮ ಷೇರುದಾರರ ಲಾಭಕ್ಕೆ ಆದ್ಯತೆ ನೀಡುತ್ತಿವೆಯೇ ಹೊರತು, ಉತ್ತಮ ಚಿಕಿತ್ಸೆಗಲ್ಲ ಎಂದೂ ಅವರು ಹೇಳಿದ್ದಾರೆ.

ಬಹಳಷ್ಟು ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕಗಳಲ್ಲಿ ಔಷಧೀಯ ಪ್ರಯೋಗಗಳ ಕುರಿತು ಪ್ರಕಟವಾಗುವ ವರದಿಗಳು ಉತ್ಪ್ರೇಕ್ಷೆಯಿಂದ ಕೂಡಿರುತ್ತವೆ. ಔಷಧಗಳ ಸುರಕ್ಷತೆ ಹಾಗೂ ಲಾಭಗಳನ್ನು ಹೆಚ್ಚಾಗಿ ತಿಳಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

ಕಳೆದ ಎರಡು ದಶಕಗಳಲ್ಲಿ ದೊಡ್ಡ ಫಾರ್ಮಾ ಕಂಪನಿಗಳು ರೂಪಿಸಿರುವ ಬಹುತೇಕ ಹೊಸ ಔಷಧಿಗಳು ಹಳೆಯದರ ನಕಲಾಗಿವೆ. ಶೇ.10ರಷ್ಟು ಮಾತ್ರ ನಿಜವಾದ ಅನ್ವೇಷಣೆ ಎಂದೂ ಮಲ್ಹೋತ್ರ ಹೇಳಿದ್ದಾರೆ. ಅವರು ಔಷಧಗಳಲ್ಲಿನ ಅಂಶಗಳನ್ನು ಬದಲಿಸುತ್ತಾರೆ ಹಾಗೂ ಹೊಸ ಹೆಸರಿಟ್ಟು ದುಬಾರಿ ಮಾಡುತ್ತಾರೆ. ಇಷ್ಟೊಂದು ಹಣವನ್ನು ಅನಗತ್ಯವಾಗಿ ವೆಚ್ಚ ಮಾಡಲಾಗುತ್ತಿದೆ ಎಂದವರು ವಿಷಾದಿಸಿದ್ದಾರೆ.

ಔಷಧಗಳ ಉತ್ಪಾದನೆಗೆ ಸಂಬಂಧಿಸಿದಂತೆ ಯಾವುದೇ ಹಣಕಾಸು ಸಂಬಂಧ ಇರದ ವಿಜ್ಞಾನಿಗಳ ಮೂಲಕ ಔಷಧದ ಪ್ರಯೋಗ ನಡೆಸಬೇಕು. ಫಾರ್ಮಾ ಕಂಪನಿಗಳಿಂದ ಔಷಧ ನಿಯಂತ್ರಕರು ಹಣ ಪಡೆಯದಂತೆ ನಿರ್ಬಂಧಿ ಸಬೇಕು. ಕಂಪನಿಗಳಿಂದ ನಿಯಂತ್ರಕರು ಹಣ ಪಡೆಯುವುದು ಹಿತಗಳ ಸಂಘರ್ಷ. ಇದರಿಂದ ತೀವ್ರ ಪರಿಣಾಮ ವಾಗುತ್ತದೆ ಎಂದೂ ಅವರು ತಿಳಿಸಿದ್ದಾರೆ.

# ರಾಜ್ಯ ಸರ್ಕಾರಕ್ಕೆ ಬೊಮ್ಮಾಯಿ ಆಗ್ರಹ

**(1ನೇ ಪುಟದಿಂದ)** ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದು ಆರು ತಿಂಗಳಾಯಿತು. ಸರ್ಕಾರದ ಬಗ್ಗೆ ಜನರು ಭ್ರಮ ನಿರಸನಗೊಂಡಿದ್ದಾರೆ ಎಂದರು.

ಇವರು ಪದೇ ಪದೇ ಗ್ಯಾರಂಟಿಗಳ ಬಗ್ಗೆ ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಜನರಿಗೆ ಗ್ಯಾರಂಟಿ ಯೋಜನೆಗಳು ತಲುಪುತ್ತಿಲ್ಲ. ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಹತ್ತು ಕೆಜಿ ಅಕ್ಕಿ ಕೊಡುವ ಬದಲು ಕೇಂದ್ರ ಸರ್ಕಾರ ನೀಡುವ ಐದು ಕೆಜಿ ಅಕ್ಕಿಯನ್ನೂ ಕೊಡುತ್ತಿಲ್ಲ. ಅದರ ಹೊರತಾಗಿ ಕಾಳಸಂತೆಯಲ್ಲಿ ಮುಕ್ತವಾಗಿ ಮಾರಾಟ ಮಾಡುತ್ತಿದ್ದಾರೆ. ಅದನ್ನು ತಡೆಯಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

ಗೃಹಲಕ್ಷ್ಮಿ ಯೋಜನೆ ಸಮೀಕ್ಷೆ ಮಾಡಿದರೆ ಮೊದಲ ತಿಂಗಳು ಕೇವಲ ಶೇ. 35ರಷ್ಟು ಜನರಿಗೆ ಹಣ ತಲುಪಿದೆ. ನಂತರದ ಕಂತುಗಳು ಸರಿಯಾಗಿ ಬಂದಿಲ್ಲ. ಗೃಹಲಕ್ಷ್ಮಿಯರ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆ. ವಿದ್ಯುತ್ ವಿಚಾರದಲ್ಲಂತೂ ಸರ್ಕಾರ ರೈತರಿಗೆ ಸರಿಯಾಗಿ ವಿದ್ಯುತ್ ನೀಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ಗಂಟೆ ನಿರಂತರ ವಿದ್ಯುತ್ ಕೊಡುವುದಾಗಿ ಹೇಳಿದ್ದಾರೆ. ಆದರೆ, ರೈತರಿಗೆ ಕೇವಲ 3 ಗಂಟೆ ಮಾತ್ರ ವಿದ್ಯುತ್ ಸಿಗುತ್ತಿದೆ. ಆದರೆ, ರಾಜ್ಯ ಕಾಂಗ್ರೆಸ್ ನಾಯಕರು ಸುಮ್ಮನೆ ತೆಲಂಗಾಣಕ್ಕೆ ಹೋಗಿ ಗ್ಯಾರಂಟಿಗಳ ಬಗ್ಗೆ ಪುಕ್ಕಟೆ ಪ್ರಚಾರ ಪಡೆದಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕರ್ನಾಟಕದ ಆರ್ಥಿಕವಾಗಿ ಸಬಲವಾಗಿರುವ ರಾಜ್ಯ, ಆದರೆ, ಯಾವುದೇ ಯೋಜನೆಗಳನ್ನು ಜಾರಿಗೆ ತರದ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಹಿಂದಿನ ಸರ್ಕಾರ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ತಂದಿದ್ದು ಅದರ ಲಾಭ ಪಡೆದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಎಸ್ಸಿಪಿ, ಟಿಎಸ್‌ಪಿ ಯೋಜನೆಗಳ 11 ಸಾವಿರ ಕೋಟಿ ರೂ. ವರ್ಗಾವಣೆ ಮಾಡಿದ್ದಾರೆ.

ರಾಜ್ಯದ ಸಾಲದ ಪ್ರಮಾಣ ಹೆಚ್ಚಾಗಿದೆ. ಸಾಲದ ಸುಳಿಗೆ ಸಿಲುಕಿರುವ ರಾಜಸ್ತಾನ, ಪಂಜಾಬ್ ಸೇರಿದಂತೆ ಮೂರು ರಾಜ್ಯಗಳಿಗೆ ರಿಸರ್ವ್ ಬ್ಯಾಂಕ್ ಎಚ್ಚರಿಕೆ ಕೊಟ್ಟಿದೆ. ನಮ್ಮ ರಾಜ್ಯವನ್ನು ಆ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬೇಡಿ ಎಂದು ಸಲಹೆ ನೀಡಿದರು.

# ಎ.ಐ. ಕಲಿಕೆ, ಮಕ್ಕಳಿಗಿರಲಿ ಎಚ್ಚರಿಕೆ
# ಪೋಷಕರು ಕೃತಕ ಬುದ್ಧಿವಂತಿಕೆಯ ಮೂರು ವಿಷಯ ಗಮನಿಸಲಿ

ನವದೆಹಲಿ, ಡಿ. 2 - ಕೃತಕ ಬುದ್ಧಿವಂತಿಕೆ (ಎ.ಐ.) ಈಗ ಸರ್ವವ್ಯಾಪಿ, ಸರ್ವಸ್ಪರ್ಷಿ ಎಂಬಂತಾಗಿದೆ. ಕಳೆದ ವರ್ಷ ಚಾಟ್‌ಜಿಪಿಟಿ ಬಂದ ನಂತರವಂತೂ, ಕೃತಕ ಬುದ್ಧಿವಂತಿಕೆ ಕುರಿತು ಎಲ್ಲೆಡೆ ಚರ್ಚೆ ನಡೆಯುತ್ತಿದೆ.

ಬದಲಾವಣೆ ಕಾಲ ಬಂದಂತೆ ಜನರೂ ಬದಲಾಗಲೇಬೇಕಿದೆ. ಈ ವರ್ಷದ ಆರಂಭದಲ್ಲಿ ಎಂ.ವೈ.ಎ.ಐ. ಕಂಪನಿಯು ಸಾಮಾಜಿಕ ಜಾಲತಾಣ ವೇದಿಕೆಯನ್ನು ಸ್ನಾಪ್‌ಚಾಟ್ ಜೊತೆ ಜೋಡಣೆ ಮಾಡಿತ್ತು. ಎಂ.ವೈ.ಎ.ಐ. ಮೂಲಕ ಯುವ ಪೀಳಿಗೆ ತಮಗೆ ಬೇಕಾದ ಯಾವುದೇ ವಿಷಯದ ಬಗ್ಗೆ ಪ್ರಶ್ನೆ ಕೇಳಬಹುದಿತ್ತು. ಸ್ನೇಹಿತರಿಗೆ ನೀಡಬೇಕಾದ ಕೊಡುಗೆಯಿಂದ ಹಿಡಿದು ಹೋಂ ವರ್ಕ್‌ಗಳವರೆಗೆ ಹಲವಾರು ವಿಷಯಗಳಿಗೆ ವಿವರ ಪಡೆದುಕೊಳ್ಳಬಹುದಿತ್ತು.

ಈ ನಡುವೆ ಮೈಕ್ರೋಸಾಫ್ಟ್ ಸಹ ತನ್ನ 'ಕೋಪೈಲಟ್' ಎಂಬ ಸೇವೆಯನ್ನು ಆರಂಭಿಸಿದೆ. ಇದು ಎ.ಐ. ಆಧರಿತ ಪ್ರತಿನಿತ್ಯದ ಸಂಗಾತಿ ಎಂದು ಮೈಕ್ರೋಸಾಫ್ಟ್ ಬಿಂಬಿಸುತ್ತಿದೆ. ಇದಾದ ನಂತರ ಬಿಂಗ್ ಚಾಟ್ ಆರಂಭಿಸಲಾಗಿತ್ತು. ಬಿಂಗ್ ಶೋಧಕದಲ್ಲಿ ಎ.ಐ. ಮೂಲಕ ಹೆಚ್ಚಿನ ನೆರವು ನೀಡಲಾಗುತ್ತಿದೆ. ದಶಕದ ಹಿಂದೆ ಫೇಸ್‌ಬುಕ್, ವಾಟ್ಸಾಪ್ ರೀತಿಯ ಸಾಮಾಜಿಕ ಜಾಲತಾಣಗಳು ಎಲ್ಲೆಡೆ ಆವರಿಸಿದ ರೀತಿಯಲ್ಲೇ, ಈಗ ಎ.ಐ. ಎಲ್ಲೆಡೆ ಪ್ರತ್ಯಕ್ಷವಾಗುತ್ತಿದೆ. ಯುವ ಪೀಳಿಗೆ ಹಾಗೂ ಹದಿಹರೆಯದವರೂ ಇದರಿಂದ ಹೊರತಾಗಿಲ್ಲ.

ಕೃತಕ ಬುದ್ಧಿವಂತಿಕೆ ಅಪಾರ ಸಾಮರ್ಥ್ಯ ಹೊಂದಿದೆ. ಆದರೆ, ಇದರಲ್ಲಿ ಲಾಭಗಳಿರುವಷ್ಟೇ ಅಪಾಯಗಳೂ ಇವೆ. ಹೀಗಾಗಿ ಮಕ್ಕಳ ಜೊತೆ ಎ.ಐ. ಬಳಸುವಾಗ ಮೂರು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಆಸ್ಟ್ರೇಲಿಯನ್ ಕ್ಯಾಥೊಲಿಕ್ ಯೂನಿವರ್ಸಿಟಿಯ ಕ್ಯಾತಿ ಮಿಲ್ಸ್ ಹಾಗೂ ಬಾಂಡ್ ಯೂನಿವರ್ಸಿಟಿಯ ಕ್ರಿಶ್ಚಿಯನ್ ಮೊರೊ ಅಭಿಪ್ರಾಯ ಪಟ್ಟಿದ್ದಾರೆ.

ಪೋಷಕರು ಎ.ಐ. ಅನ್ನು ಅರ್ಥ ಮಾಡಿಕೊಂಡು ಮಕ್ಕಳಿಗೆ ಪರಿಚಯಿಸುವುದು ಮುಖ್ಯ. ಮೊದಲು ಉಚಿತ ಎ.ಐ. ಜನರೇಟಿವ್ ತಂತ್ರಾಂಶ ಬಳಸಿಕೊಂಡು ಕೆಲ ಪ್ರಶ್ನೆಗಳನ್ನು ಕೇಳಿ ಅದರ ಅನುಭವ



ಪಡೆದುಕೊಳ್ಳಬೇಕು ಎಂದವರು ಹೇಳಿದ್ದಾರೆ.

**ಒರೆಗೆ ಹಚ್ಚಿ :** ಜನರೇಟಿವ್ ಎ.ಐ. ಅತ್ಯಂತ ಸುಲಭವಾಗಿ ಚಿತ್ರಗಳನ್ನು ರಚಿಸುತ್ತದೆ ಹಾಗೂ ಕಥೆಗಳನ್ನೂ ಬರೆಯುತ್ತದೆ. ಆದರೆ, ತಾನು ಏನು ರೂಪಿಸುತ್ತಿದ್ದೇನೆ ಎಂಬ ಬಗ್ಗೆ ಅದು ಗಮನ ಹರಿಸುವುದಿಲ್ಲ.

ಈ ತಂತ್ರಜ್ಞಾನ ತಾನು ತಿಳಿಸುವ ಮೂಲದ ನಂಬಿಕಾರ್ಹತೆಯನ್ನು ಪರಿಗಣಿಸುವುದಿಲ್ಲ. ಇದರ ಮೂಲಗಳು ಖಚಿತವೂ ಆಗಿರುವುದಿಲ್ಲ. ನಿರ್ದಿಷ್ಟ ಕಾಲಾವಧಿಯ ಮಾಹಿತಿಯನ್ನು ಮಾತ್ರ ಎ.ಐ. ಪರಿಗಣಿಸುತ್ತದೆ. ಹೀಗಾಗಿ ಇತ್ತೀಚಿನ ಬೆಳವಣಿಗೆಗಳನ್ನು ಗುರುತಿಸದೇ ಇರಬಹುದು.

ಹೀಗಾಗಿ ಎ.ಐ. ಮೂಲಕ ಸಿಗುವ ಪ್ರತಿಯೊಂದು ಪದವನ್ನೂ ವಿಶ್ಲೇಷಿಸಬೇಕು ಹಾಗೂ ಒರೆಗೆ ಹಚ್ಚಬೇಕು. ಎ.ಐ. ಮಾಹಿತಿಯ ಬಗ್ಗೆ ಸಿನಿಕರಾಗಿದ್ದರೆ ತಪ್ಪೇನಿಲ್ಲ. ಮಕ್ಕಳಲ್ಲೂ ಪ್ರಶ್ನಿಸುವ ಮನೋಭಾವ ಬೆಳೆಸಲು ಇದು ಅತ್ಯುತ್ತಮ ಅವಕಾಶ.

**ಚಾಟ್‌ಬಾಟ್‌ಗಳ ಗಮನಿಸಿ :** ಕಂಪ್ಯೂಟರ್ ಚಾಟ್‌ಬಾಟ್‌ಗಳು ಥೇಟ್ ಮನುಷ್ಯರ ರೀತಿಯಲ್ಲೇ ಪ್ರಶ್ನೋತ್ತರ ನಡೆಸುತ್ತವೆ. ರೆಪ್ಲಿಕಾ ಎಂಬುದು ಸಂಭಾಷಣೆಯ ಚಾಟ್‌ಬಾಟ್‌ಗಳಲ್ಲಿ ಒಂದಾಗಿದೆ. ಯಾವುದೇ ರೀತಿಯ ಸ್ನೇಹ ಸಂಬಂಧ ಬೆಳೆಸಲು ಈ ಚಾಟ್‌ಬಾಟ್ ಬಳಕೆಯಾಗುತ್ತಿದೆ.

ಆದರೆ, ಈ ರೀತಿಯ ಚಾಟ್‌ಬಾಟ್‌ಗಳಲ್ಲಿ ಯಾವುದೇ ಮಾನವ ನಿರ್ಬಂಧ ಇಲ್ಲವೇ ವಿವೇಚನೆ ಇರುವುದಿಲ್ಲ. ಹೀಗಾಗಿ ಎ.ಐ. 'ಸ್ನೇಹಿತರ' ಜೊತೆ ಮಕ್ಕಳು ಹೆಚ್ಚು ಸಮಯ ಕಳೆಯುವುದು ಸೂಕ್ತವಲ್ಲ.

ಈ ರೀತಿಯ ಆಪ್‌ಗಳು ಮಕ್ಕಳನ್ನು ಅನೈತಿಕ ಹಾಗೂ ಅಪಾಯಕಾರಿ ಪರಿಸ್ಥಿತಿಗೆ ದೂಡಬಹುದು. ಆನ್‌ಲೈನ್‌ನಲ್ಲಿ ಮನುಷ್ಯರ ರೀತಿ ಸಂವಾದ ನಡೆಸುವವರೆಲ್ಲರೂ ನಿಜವಾದವರಲ್ಲ ಎಂಬುದನ್ನು ಮಕ್ಕಳಿಗೆ ತಿಳಿಸಬೇಕಿದೆ.

ಚಾಟ್‌ಬಾಟ್‌ಗಳು ತಮ್ಮನ್ನು ರೂಪಿಸಿದ ಸೂತ್ರಧಾರಿಗಳ ಅಗತ್ಯಗಳಿಗೆ ಅನುಗುಣವಾಗಿ ವರ್ತಿಸುತ್ತವೆ. ಚಾಟ್‌ಬಾಟ್‌ಗಳ ಮೂಲಕ ಸಂವಾದ ನಡೆಸಿ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಹೆಚ್ಚು ಅವಕಾಶಗಳಿಲ್ಲ.

**ಅಪ್‌ಲೋಡ್ ಅಪಾಯ :** ಜನರೇಟಿವ್ ಎ.ಐ. ಜೊತೆ ಟೆಕ್ಸ್ಟ್ ಮೂಲಕ ಸಂವಾದ ನಡೆಸುವುದಕ್ಕಿಂತ, ಚಿತ್ರ ಹಾಗೂ ವಿಡಿಯೋಗಳನ್ನು ಅಪ್‌ಲೋಡ್ ಮಾಡುವುದು ಅಪಾಯಕಾರಿ ಆಗಬಹುದು. ಮಕ್ಕಳು ತಮ್ಮ ಚಿತ್ರಗಳನ್ನು ಅಪ್‌ಲೋಡ್ ಮಾಡುವಾಗ ಎಚ್ಚರಿಕೆ ವಹಿಸುವಂತೆ ತಿಳಿಸಬೇಕಿದೆ.

ಚಿತ್ರಗಳನ್ನು ಎ.ಐ.ನಲ್ಲಿ ಅಪ್‌ಲೋಡ್ ಮಾಡಿದ ನಂತರ ಖಾಸಗಿತನದ ರಕ್ಷಣೆ ಕಠಿಣವಾಗುತ್ತದೆ. ಇಂಟರ್‌ನೆಟ್‌ನಲ್ಲಿ ಹಂಚಿಕೊಳ್ಳುವ ಯಾವುದೇ ಚಿತ್ರ ಹಾಗೂ ವಿಡಿಯೋಗಳನ್ನು ಎ.ಐ. ಬಳಸಿಕೊಳ್ಳುತ್ತದೆ ಎಂಬುದನ್ನು ತಿಳಿಸಬೇಕು.

ಎ.ಐ. ಸಶಕ್ತ ಕಲಿಕೆ ಹಾಗೂ ಸಂವಹನ ಮಾರ್ಗವಾಗಿದೆ. ಈ ವಲಯದಲ್ಲಿ ಆಗುತ್ತಿರುವ ಬೆಳವಣಿಗೆಗಳು ಉತ್ಸಾಹ ತರುವಂತಿವೆ. ಈ ಬಗ್ಗೆ ಮಕ್ಕಳು ತಿಳುವಳಿಕೆ ಹೊಂದಿದರೆ ಅವರ ಸಾಮರ್ಥ್ಯವೂ ಬೆಳೆಯಲಿದೆ. ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ಈ ದಿಸೆಯಲ್ಲಿ ಹೆಜ್ಜೆ ಇಡುವುದು ಅಗತ್ಯ.


**ಮಾನ್ಯ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ.ಜೆ.ಎಂ. ನ್ಯಾಯಾಲಯ ದಾವಣಗೆರೆ**

**ಅಸಲು ದಾವಾ. ನಂ. 199/2020**

**ವಾದಿಯರು : 1)** ಸುಮಿತ್ರಮ್ಮ ಕೋಂ ನಿಂಗಪ್ಪ, ವಯಸ್ಸು 62 ವರ್ಷ, ವಾಸ ಮಲ್ಲೇನಹಳ್ಳಿ ಗ್ರಾಮ. ದಾವಣಗೆರೆ ತಾ. ಮತ್ತು ಜಿ.
2) ರತ್ನಮ್ಮ ಕೋಂ ಲೇಟ್ ಷಣ್ಮುಖಪ್ಪ, ವಯಸ್ಸು ಸುಮಾರು 58 ವರ್ಷ, ವಾಸ ಹೆಚ್. ಕಲ್ಪನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

***ವಿರುದ್ಧ***

**ಪ್ರತಿವಾದಿಯರು : 1)** ರೇವಣಸಿದ್ದಪ್ಪ ಬಿನ್ ಲೇಟ್ ಮುರುಗೇಂದ್ರಪ್ಪ, ವಯಸ್ಸು ಸುಮಾರು 68 ವರ್ಷ, **2)** ಚಂದ್ರಪ್ಪ ಬಿನ್ ಲೇಟ್ ಮುರುಗೇಂದ್ರಪ್ಪ, (ಪೌತಿ ವಾರಸುದಾರರು) **2.ಎ)** ರತ್ನಮ್ಮ ಕೋಂ ಚಂದ್ರಪ್ಪ, ವಯಸ್ಸು ಸುಮಾರು 69 ವರ್ಷ, **2.ಬಿ)** ಬಸವರಾಜ ಬಿನ್ ಲೇಟ್ ಚಂದ್ರಪ್ಪ ವಯಸ್ಸು ಸುಮಾರು 45 ವರ್ಷ, **2.ಸಿ)** ಮಹಾಬಲೇಶ್ವರ ಬಿನ್ ಲೇಟ್ ಚಂದ್ರಪ್ಪ ವಯಸ್ಸು ಸುಮಾರು 43 ವರ್ಷ, ಪ್ರತಿವಾದಿ ನಂ. 2ಎ) ಯಿಂದ 2.ಸಿ) ವರೆಗಿನವರ ವಾಸ, ಕಬ್ಬೂರು ಗ್ರಾಮ, ದಾವಣಗೆರೆ ತಾಲ್ಲೂಕು. ಮತ್ತು ಜಿಲ್ಲೆ. **3)** ಯಶೋದಮ್ಮ ತಂದೆ ಲೇಟ್ ಮುರುಗೇಂದ್ರಪ್ಪ, ವಯಸ್ಸು ಸುಮಾರು 64 ವರ್ಷ, ವಾಸ ಗಂಗನಕಟ್ಟೆ ಗ್ರಾಮ, ದಾವಣಗೆರೆ. **4)** ಮಲ್ಲಿಕಾರ್ಜುನಪ್ಪ ಬಿನ್ ಲೇಟ್ ಮುರುಗೇಂದ್ರಪ್ಪ, ವಯಸ್ಸು 60 ವರ್ಷ. **5)** ನೀಲಮ್ಮ ಕೋಂ ಲೇಟ್ ಮಲ್ಲಿಕಾರ್ಜುನ ವಯಸ್ಸು ಸುಮಾರು 58 ವರ್ಷ, ವಾಸ ಕೊಡಗನೂರು ಗ್ರಾಮ. ದಾವಣಗೆರೆ. **6)** ಪ್ರಭಾಕರ್ ಬಿನ್ ಲೇಟ್ ಮುರುಗೇಂದ್ರಪ್ಪ, ವಯಸ್ಸು ಸುಮಾರು 80 ವರ್ಷ, **7)** ಶಿವಮ್ಮ ಕೋಂ ಲೇಟ್ ಬಸವರಾಜಪ್ಪ, ವಯಸ್ಸು ಸುಮಾರು 80 ವರ್ಷ, **8)** ಶಿವಕುಮಾರ ಬಿನ್ ಲೇಟ್ ಬಸವರಾಜಪ್ಪ, ವಯಸ್ಸು ಸುಮಾರು 60 ವರ್ಷ, **9)** ಶ್ರೀಮಾತಮ್ಮ ಕೋಂ ತಿಪ್ಪೇಶಪ್ಪ, ವಯಸ್ಸು ಸುಮಾರು 53 ವರ್ಷ, ವಾಸ ಬೊಮ್ಮೇನಹಳ್ಳಿ ಗ್ರಾಮ, ದಾವಣಗೆರೆ. **10)** ವನಜಾಕ್ಷಮ್ಮ ಕೋಂ ರವಿ ವಯಸ್ಸು ಸುಮಾರು 54 ವರ್ಷ. ವಾಸ ಹಿರಿಯೂರು ಗ್ರಾಮ, ಹೊಳಲ್ಕೆರೆ. ಟಿ. ಚಿತ್ರದುರ್ಗ ಜಿಲ್ಲೆ, **11)** ಸರೋಜಮ್ಮ ಕೋಂ ಶಂಬಣ್ಣ, ವಯಸ್ಸು ಸುಮಾರು 52 ವರ್ಷ, ವಾಸ ಹಿರಿಯೂರು ಗ್ರಾಮ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. **12)** ಬಸಮ್ಮ ಕೋಂ ಶಿವಕುಮಾರ್, ವಯಸ್ಸು ಸುಮಾರು 50 ವರ್ಷ. **13)** ಬಸಮ್ಮ ಕೋಂ ಕುಬೇರಪ್ಪ, ವಯಸ್ಸು ಸುಮಾರು 70 ವರ್ಷ. ವಾಸ ಕಾಳೂರು ಗ್ರಾಮ, ದಾವಣಗೆರೆ, **14)** ಶರಣಮ್ಮ ಕೋಂ ಲೇಟ್ ಶಿವಮೂರ್ತ್ಯಪ್ಪ, ವಯಸ್ಸು ಸುಮಾರು 68 ವರ್ಷ, ವಾಸ ಗಂಗನಕಟ್ಟೆ ಗ್ರಾಮ, ದಾವಣಗೆರೆ ತಾಲ್ಲೂಕು. **15)** ಶಾರದಮ್ಮ ಕೋಂ ರೇವಣಸಿದ್ದಪ್ಪ, ವಯಸ್ಸು ಸುಮಾರು 65 ವರ್ಷ **16)** ಮಾಯಕೊಂಡ ಕೆಂಚವೀರಪ್ಪ, ಬಿನ್ ರೇವಣಸಿದ್ದಪ್ಪ, ವಯಸ್ಸು ಸುಮಾರು 63 ವರ್ಷ. ವಾಸ. ಬಾಡ ಗ್ರಾಮ. ದಾವಣಗೆರೆ ತಾಲ್ಲುಕು ಮತ್ತು ಜಿಲ್ಲೆ, **17)** ಬಸವರಾಜಪ್ಪ ಬಿನ್ ರೇವಣಸಿದ್ದಪ್ಪ, ವಯಸ್ಸು ಸುಮಾರು 60 ವರ್ಷ, **18)** ಗುರುಶಾಂತಪ್ಪ ಬಿನ್ ರೇವಣಸಿದ್ದಪ್ಪ. ವಯಸ್ಸು ಸುಮಾರು 55 ವರ್ಷ. ಪ್ರತಿವಾದಿ ನಂ. 1, 2, 4, 6, 7, 8, 12, 15, 17 ಮತ್ತು 18 ಇವರ ವಾಸ, ಕಬ್ಬೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರ ಅಡಿಯಲ್ಲಿ ಪ್ರತಿವಾದಿ 10, 11, 13, 16, ಇವರ ವಿರುದ್ಧ ನೀಡಲಾದ ಪತ್ರಿಕಾ ಪ್ರಕಟಣಾ ನೋಟೀಸು**

ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಪಾಲು ವಿಭಾಗ ಹಾಗೂ ಪ್ರತ್ಯೇಕ ಸ್ವಾಧೀನತೆ ಹಾಗೂ ಇತರೆ ಪರಿಹಾರಗಳನ್ನು ಬೇಡಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಈ ಪ್ರಕರಣದಲ್ಲಿ ನೀವು ಪ್ರತಿವಾದಿ ನಂ. 10) ವನಜಾಕ್ಷಮ್ಮ ಕೋಂ ರವಿ. 11) ಸರೋಜಮ್ಮ ಕೋಂ ಶಂಬಣ್ಣ, 13) ಬಸಮ್ಮ ಕೋಂ ಕುಬೇರಪ್ಪ, 16) ಮಾಯಕೊಂಡ ಕೆಂಚವೀರಪ್ಪ ಬಿನ್ ರೇವಣಸಿದ್ದಪ್ಪ ಆಗಿದ್ದು, ನ್ಯಾಯಾಲಯವು ಈ ಹಿಂದೆ ಹಲವು ಬಾರಿ ನಿಮಗೆ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಹಾಗೂ ನ್ಯಾಯಾಲಯದ ಅಮೀನರ ಮೂಲಕ ಕಳುಹಿಸಿದ್ದರೂ ಸಹ ನಿಮಗೆ ಅವು ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ: 19/01/2024 ರಂದು ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಾಗಿ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ವಿರುದ್ಧ ನ್ಯಾಯಾಲಯವು ಏಕ ಪಕ್ಷೀಯ ನಿರ್ಧಾರ ತೆಗೆದುಕೊಳ್ಳುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 02.12.2023ರಂದು ಕೊಡಲ್ಪಟ್ಟಿದೆ.

ವಾದಿಯ ಪರ ವಕೀಲರು
**(ಶ್ರೀ ಎನ್. ರಾಮದಾಸ್)** ವಕೀಲರು
ಚಾಮರಾಜಪೇಟೆ, ದಾವಣಗೆರೆ.
ಸ್ಥಳ : ದಾವಣಗೆರೆ
ದಿನಾಂಕ : 21.12.2023

ನ್ಯಾಯಾಲಯದ ಆದೇಶಮ ಮೇರಗೆ
**ಶಿರಸ್ತೇದಾರರು**
ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ.ಜೆ.ಎಂ.
ನ್ಯಾಯಾಲಯ, ದಾವಣಗೆರೆ.



**ದಿ ದಾವಣಗೆರೆ ಕ್ಲಬ್ (ರಿ), ದಾವಣಗೆರೆ.**

**ಮಾನ್ಯ ಸದಸ್ಯರುಗಳ ಗಮನಕ್ಕೆ**

ದಿನಾಂಕ : 03.12.2023ರ ಭಾನುವಾರದಂದು ಬೆಳಿಗ್ಗೆ 10.30 ಗಂಟೆಗೆ ಕ್ಲಬ್‌ನಲ್ಲಿ ಅಧ್ಯಕ್ಷರಾದ **ಶ್ರೀ ಎ.ಬಿ. ಚಂದ್ರಶೇಖರ್** ಇವರ ಅಧ್ಯಕ್ಷತೆಯಲ್ಲಿ ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಗಾಗಿ ಹಾಗೂ ಬೈಲಾ ತಿದ್ದುಪಡಿಯ ಬಗ್ಗೆ ಸರ್ವ ಸದಸ್ಯರ ವಿಶೇಷ ಮಹಾಸಭೆಯನ್ನು ಕರೆಯಲಾಗಿರುತ್ತದೆ. ಸದಸ್ಯರು ಸದರಿ ಸಭೆಗೆ ಆಗಮಿಸಬೇಕಾಗಿ ವಿನಂತಿ.

**ಆಡಳಿತ ಮಂಡಳಿ**
**ದಾವಣಗೆರೆ ಕ್ಲಬ್, ದಾವಣಗೆರೆ.**



**ಮಾನ್ಯ ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ದಾವಣಗೆರೆ**

ಅಸಲು ದಾವಾ ನಂ. 214/2022

**ವಾದಿಗಳು :** ಯಶೋದಮ್ಮ ಮತ್ತು ಇತರರು. ವಿರುದ್ಧ :
**ಪ್ರತಿವಾದಿಗಳು** ಭಾಗ್ಯಮ್ಮ ಮತ್ತು ಇತರರು
**ಪ್ರತಿವಾದಿ ನಂ. 2)** ಶಾಬಾಜ್ ಬಿ ಕೋಂ ನೂರುಲ್ಲಾ ಸಾಬ್, ವಯಸ್ಸು 50 ವರ್ಷ.
**ಪ್ರತಿವಾದಿ ನಂ. 3)** ಶಾಜುಬಿ ಕೋಂ ರಹಮತಿ ಸಾಬ್, ವಯಸ್ಸು 50 ವರ್ಷ, ಇಬ್ಬರ ವಿಳಾಸ: ತುರ್ಚಘಟ್ಟ, ಹೊಸ ಬಡಾವಣೆ, ಬೆಳವನೂರು ಪೋಸ್ಟ್, ದಾವಣಗೆರೆ.

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ಪ್ರತಿವಾದಿಯವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು:**

ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಸ್ವತ್ತಿನ ಘೋಷಣೆಗಾಗಿ ಮತ್ತು ನಿರ್ಬಂಧಕಾಜ್ಞೆಗಾಗಿ ಹಾಗೂ ಇತರೆ ಪರಿಹಾರಗಳನ್ನು ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು 2ನೇ ಮತ್ತು 3ನೇ ಪ್ರತಿವಾದಿಯಾಗಿದ್ದು, ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ 26.12.2023ರಂದು ಬೆಳಗ್ಗೆ 11-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ 1-12-2023 ರಂದು ಕೊಡಲ್ಪಟ್ಟಿದೆ.

ವಾದಿಯ ಪರ ವಕೀಲರು
**(ಎನ್ .ರಾಮದಾಸ್)**
ದಾವಣಗೆರೆ

ನ್ಯಾಯಾಲಯದ ಆದೇಶದ ಮೇರೆಗೆ,
**ಶಿರಸ್ತೇದಾರರು**
ಮಾನ್ಯ ಮೂರನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ, ದಾವಣಗೆರೆ.



**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ರೇವಣಸಿದ್ದಪ್ಪ ಬಿನ್ ಕರಿಬಸಪ್ಪ (ಮೊಬೈಲ್ ನಂ.6360611661. 9008250843) ದೊಡ್ಡಬಾತಿ ದಾವಣಗೆರೆ ತಾಲ್ಲೂಕು ಇವರು ದೊಡ್ಡಬಾತಿ ಗ್ರಾಮದ ವಾಸಿಗಳಾದ ಬಿ.ಜಿ. ಮಂಜುನಾಥ್ ಬಿನ್ ಬಿ.ಜಿ. ರೇವಣಸಿದ್ದಪ್ಪ (ಮೊ. 8747581530) ಇವರಿಂದ ದೊಡ್ಡಬಾತಿ ಗ್ರಾಮದ ಸರಹದ್ದಿಗೆ ಸೇರಿದ ರೇವಣಸಿದ್ದೇಶ್ವರ ದೇವಸ್ಥಾನದ ಹತ್ತಿರ ಇರುವ ಪಂಚಾಯಿತಿ ನಂ. 60/2 ಇ-ಸ್ವತ್ತು ನಂ. 151200201400101892 ಅಳತೆ 28x100 ಅಡಿ ಉಳ್ಳ ಖಾಲಿ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅಥವಾ ತಂಟೆ-ತಕರಾರು ಇದ್ದಲ್ಲಿ ತಮ್ಮ ತಕರಾರನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು. 7 ದಿನಗಳು ಮುಗಿದ ನಂತರ ಬಂದ ತಕಾರಾರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ತಿಳಿಯಿರಿ.

**ಕೆ.ಬಿ. ಶೈಲಾಶ್ರೀ**
**ವಕೀಲರು, #1963/1,2**
**SS ಲೇಔಟ್, ಎ ಬ್ಲಾಕ್,**
**ಒಳಾಂಗಣ ಕ್ರೀಡಾಂಗಣ ಹತ್ತಿರ,**
**ದಾವಣಗೆರೆ.**
**ಮೊ. : 9448658502**

**ಸಹಿ/- ಕೆ.ಬಿ. ಶೈಲಾಶ್ರೀ**
**ಬಿ.ಎಸ್ಸಿ ಎಲ್.ಎಲ್.ಬಿ., ಪಿಜಿಡಿಎಂ**
**ವಕೀಲರು KAR-70/98**

## ಹರಿಹರದಲ್ಲಿ ಇಂದು ಆರೋಗ್ಯ ತಪಾಸಣೆ ಶಿಬಿರ



ಹರಿಹರ, ಡಿ. 2 -ನಗರದ ಅಮರಾವತಿ ಕೆ.ಹೆಚ್.ಬಿ. ಕಾಲೋನಿ ವೀರಶೈವ ಲಿಂಗಾಯತ ಸಮಾಜ ಸೇವಾ ಸಂಘ ಹಾಗೂ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪ್ರೀತಿ ಆರೈಕೆ ಟ್ರಸ್ಟ್ ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ನಾಳೆ ದಿನಾಂಕ 3 ರಂದು ಭಾನುವಾರ ಬೆಳಿಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ವೀರಶೈವ ಲಿಂಗಾಯತ ಸಮಾಜ ಸೇವಾ ಸಂಘದ ಅಧ್ಯಕ್ಷ ಜಿ.ಕೆ. ಮಲ್ಲಿಕಾರ್ಜುನ ಮತ್ತು ಕಾರ್ಯದರ್ಶಿ ವೀರೇಶ್ ಯಾದವಾಡ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಹೊಸ ಕೋರ್ಟ್ ಹಿಂಭಾಗ ಚೌಡಮ್ಮ ದೇವಸ್ಥಾನ ಹತ್ತಿರ ಸ್ಥಳೀಯ ನಗರಸಭೆ ಸದಸ್ಯರಾದ ದಿನೇಶ್ ಬಾಬು ಅವರಿಂದ ಆರೋಗ್ಯ ತಪಾಸಣೆಗೆ ಚಾಲನೆ ನೀಡಲಾಗುತ್ತದೆ.

ಈ ಸಂದರ್ಭದಲ್ಲಿ ಪರಶುರಾಮ ಗೌಳಿ, ರೇವಣಸಿದ್ದಪ್ಪ ಪಿ.ವಿ. ಶಿವಪ್ರಕಾಶ್ ಸ್ವಾಮಿ ಇತರರು ಹಾಜರಿದ್ದರು.

## ಬಿಜೆಪಿ ಮೂಲ ಕಾರ್ಯಕರ್ತರ ಸಭೆ

ಜಗಳೂರು ತಾಲ್ಲೂಕಿನ ಬಿಜೆಪಿಯ ಮೂಲ ಕಾರ್ಯಕರ್ತರ ಸಭೆ ದಾವಣಗೆರೆ ಪ್ರವಾಸಿ ಮಂದಿರದಲ್ಲಿ ಇಂದು ಮಧ್ಯಾಹ್ನ 12 ಕ್ಕೆ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಲಿಂಗರಾಜ್ ತಿಳಿಸಿದ್ದಾರೆ.

# ನಗರದಲ್ಲಿ ನಾಳೆಯಿಂದ 'ಶರಣರು ಕಂಡ ಶಿವ' ಪ್ರವಚನ ಮಾಲೆ

ದಾವಣಗೆರೆ, ಡಿ.2- ನಿರಾಕಾರ ಜ್ಯೋತಿ ಸ್ವರೂಪನಾಗಿರುವ ಪರಮಾತ್ಮ ಅರ್ಥಾತ್ ಭಗವಂತನನ್ನು ಸರ್ವರಿಗೂ ಪರಿಚಯಿಸುವ ನಿಟ್ಟಿನಲ್ಲಿ ಸುದೀರ್ಘ 30 ದಿನಗಳ 'ಶರಣರು ಕಂಡ ಶಿವ' ಪ್ರವಚನ ಮಾಲೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 4 ರಿಂದ ಇದೇ ದಿನಾಂಕ 30 ರವರೆಗೆ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾನಗರ ಶಾಖಾ ಕೇಂದ್ರದ ವತಿಯಿಂದ ಕೇಂದ್ರದ ಆವರಣದಲ್ಲಿ ಈ ಪ್ರವಚನ ನಡೆಯಲಿದೆ ಎಂದು ಶಾಖೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಭಗವಂತನ ರೂಪವೇನು?, ಅವನ ಪಾತ್ರವೇನು?, ಅವನ ಸ್ಮರಣೆಯಿಂದ ನಮಗೆ ಸಿಗಬಹುದಾದ ಲಾಭವೇನು? ಎಂಬಿತ್ಯಾದಿ ವಿಷಯಗಳು ಪ್ರವಚನ ಮಾಲೆಯಲ್ಲಡಗಿವೆ ಎಂದು ಹೇಳಿದರು.

**ಪ್ರವಚನದ ಮುಖ್ಯ ಉದ್ದೇಶ** : ಅರಿತರೆ ಶರಣರು, ಮರೆತರೆ ಮಾನವರು ಎಂದರೇನು?, ಶರಣರಿಗೂ-ಶಿವನಿಗೂ ಇರುವ ಸಂಬಂಧವೇನು?, ಶಂಕರನಿಗೂ-ಪರಮಾತ್ಮ ಶಿವನಿಗೂ ಇರುವ ಸಂಬಂಧವೇನು?, ಜ್ಯೋತಿರ್ಲಿಂಗಗಳಿಗೂ-ಶಿವನಿಗೂ ಇರುವ ಸಂಬಂಧವೇನು?, ಸ್ಥಾವರ ಲಿಂಗಗಳಿಗೂ, ಅಂಗೈ ಮೇಲಿನ ಲಿಂಗಗಳಿಗೂ ಸಂಬಂಧವಿದೆಯೇ?, ಶರಣರು ಕಂಡ ಶಿವನಿಗೂ, ಪುರಾಣದ ಶಿವನಿಗೂ ಇರುವ ವ್ಯತ್ಯಾಸವೇನು?



ಶರಣರು ಕಂಡ ಶಿವನಿಗೂ-ಬ್ರಹ್ಮ, ವಿಷ್ಣು, ಶಂಕರಾದಿ ಗೃಹಸ್ಥ ದೇವತೆಗಳಿಗಿರುವ ವ್ಯತ್ಯಾಸವೇನು? ಸೇರಿದಂತೆ, ಇತರೆ ವಿಚಾರಗಳು ಪ್ರವಚನದ ಮುಖ್ಯಾಂಶಗಳಾಗಿವೆ.

ಜೀವ ಎಂದರೇನು? ಜೀವ, ನಿರ್ಜೀವಗಳ ವ್ಯತ್ಯಾಸವೇನು?, ನಾನು ಯಾರು? ನೀನು ಯಾರು? ಎಲ್ಲರೂ ಯಾರು?, ಪುರುಷ ಎಂದರೇನು? ಗಂಡು ಎಂದರೇನು? ಹೆಣ್ಣು ಎಂದರೇನು?, ಜನನ ಯಾರಿಗೆ? ಮರಣ ಯಾರಿಗೆ?, ನೀನು ಹುಟ್ಟಿ ಬರಲು ಕಾರಣವೇನು?, ನೀನು ಸತ್ತ ಮೇಲೆ ಎಲ್ಲಿಗೆ ಹೋಗುವೆ?, ಮಾನಸಿಕ ಶಾಂತಿ, ಮಾನಸಿಕ ಆರೋಗ್ಯ ಪಡೆಯುವ ವಿಧಾನವೇನು?, ಭಾರತದ ಭವಿಷ್ಯವೇನು? ವಿಶ್ವದ ಭವಿಷ್ಯವೇನು?, ಪಾಪ-ಪುಣ್ಯ, ಧರ್ಮ-ಕರ್ಮಗಳ ರಹಸ್ಯವೇನು?, ಪರಮಾತ್ಮ ಎಂದರೆ ಯಾರು? ಆತ ಎಲ್ಲಿದ್ದಾನೆ? ಆತನನ್ನು ನೋಡಲು ಸಾಧ್ಯವೇ? ಇತ್ಯಾದಿ ಪ್ರಶ್ನೆಗಳಿಗೆ ಪ್ರವಚನದಲ್ಲಿ ಉತ್ತರ ಸಿಗುತ್ತವೆ.

ಈಶ್ವರೀಯ ವಿಶ್ವವಿದ್ಯಾಲಯ ಹುಬ್ಬಳ್ಳಿ ವಲಯದ ನಿರ್ದೇಶಕರೂ, ಅಧ್ಯಾತ್ಮಿಕ ಮಾಸ ಪತ್ರಿಕೆ 'ವಿಶ್ವ ನವ ನಿರ್ಮಾಣ'ದ ಸಂಪಾದಕರೂ, ಬಾಲ ಬ್ರಹ್ಮಚಾರಿಗಳೂ, 84 ವರ್ಷದ ಮಹಾನ್ ತಪಸ್ವಿಗಳೂ ಆದ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿಗಳವರು ಈ ಪ್ರವಚನವನ್ನು ನಡೆಸಿಕೊಡಲಿದ್ದಾರೆ.

ನಾಡಿದ್ದು ದಿನಾಂಕ 4 ರಿಂದ ಇದೇ ದಿನಾಂಕ 30ರವರೆಗೆ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ ಒಂದು ಗಂಟೆ ಕಾಲ ಪ್ರವಚನ ನಡೆಯಲಿದ್ದು, ಸಾರ್ವಜನಿಕರು ಪ್ರತಿದಿನವೂ ಪ್ರವಚನದಲ್ಲಿ ಭಾಗವಹಿಸುವುದರ ಮೂಲಕ ಪರಮಾತ್ಮನ ಸಂದೇಶವನ್ನು ಅರಿತುಕೊಂಡು ಪ್ರತಿಯೊಬ್ಬರೂ ಸನ್ಮಾರ್ಗದಲ್ಲಿ ಮುನ್ನಡೆಯುವಂತೆ ಗೀತಾಜಿ ಕೇಳಿಕೊಂಡರು.

**ಉದ್ಘಾಟನಾ ಸಮಾರಂಭ** : ನಾಡಿದ್ದು ದಿನಾಂಕ 4ರ ಸೋಮವಾರ ಸಂಜೆ 6 ಗಂಟೆಗೆ ಶ್ರೀ ಜಡೇಸಿದ್ದ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ 'ಶರಣರು ಕಂಡ ಶಿವ' ಪ್ರವಚನ ಮಾಲಿಕೆಯ ಉದ್ಘಾಟನಾ ಸಮಾರಂಭ ಆಯೋಜನೆಗೊಂಡಿದೆ. ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಪ್ರಧಾನ ಕೇಂದ್ರದ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಅಧ್ಯಕ್ಷತೆ ವಹಿಸುವರು. ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಉಪವಿಭಾಗಾಧಿಕಾರಿ ಶ್ರೀಮತಿ ಎನ್.ದುರ್ಗಾಶ್ರೀ, ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು, ಈಶ್ವರೀಯ ವಿಶ್ವವಿದ್ಯಾಲಯ ವಿದ್ಯಾನಗರ ಶಾಖೆ ಕಟ್ಟಡದ ಭೂ ದಾನಿ ಶ್ರೀಮತಿ ಲಕ್ಷ್ಮಮ್ಮ ದ್ಯಾಮಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

**ಸಂಸ್ಥೆಯ ಧ್ಯೇಯ** : ಮಾನವರು, ದೇವಾತ್ಮರು, ಪುಣ್ಯಾತ್ಮರು, ಮಹಾತ್ಮರು ಹೀಗೆ ಪ್ರತಿಯೊಬ್ಬರೂ ಸಂದರ್ಭಕ್ಕನುಗುಣವಾಗಿ ಪರಮಾತ್ಮನನ್ನು ಸ್ಮರಿಸುತ್ತಾರೆ. ಸ್ವಯಂ ಪರಮಾತ್ಮನೇ ಸ್ಥಾಪಿಸಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು, ಸಾಮಾನ್ಯ ಮಾನವನನ್ನು ಮಹಾ ಮಾನವನನ್ನಾಗಿ ಪರಿವರ್ತನೆ ಮಾಡುವ ದಿಸೆಯಲ್ಲಿ ಸೇವೆ ಸಲ್ಲಿಸುತ್ತಿದೆ. ವಿಶ್ವ ಪರಿವರ್ತನೆಗೆ ಬದ್ಧವಾಗಿರುವ ಈ ಸಂಸ್ಥೆಯು ವಿಶ್ವ ಭ್ರಾತೃತ್ವದಲ್ಲಿತನ್ನದೇಆದವಿಶಿಷ್ಟ-ಮಾದರಿ-ಅರ್ಥಪೂರ್ಣ ಸೇವೆ ಸಲ್ಲಿಸುತ್ತಿರುವ ಏಕೈಕ ಅಧ್ಯಾತ್ಮಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ಸಂಸ್ಥೆಯು ಜಗತ್ತಿನಾದ್ಯಂತ 140 ರಾಷ್ಟ್ರಗಳಲ್ಲಿ ತನ್ನ ಸೇವಾ ಕೇಂದ್ರವನ್ನು ಹೊಂದಿದ್ದು, ವಿಶ್ವದ ಎಲ್ಲಾ ಸೇವಾ ಕೇಂದ್ರಗಳಲ್ಲಿ ಏಕಕಾಲದಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ 6.30 ರಿಂದ 8 ರವರೆಗೆ ನಡೆಯಲಿರುವ ಪ್ರವಚನದಲ್ಲಿ ಭಾಗವಹಿಸುವ ಲಕ್ಷಾಂತರ ಜನರಿಗೆ ಪರಮಾತ್ಮನ ಸಂದೇಶವನ್ನು ಉಚಿತವಾಗಿ ನೀಡುತ್ತಿದೆ ಎಂದು ಬ್ರಹ್ಮಾಕುಮಾರಿ ಗೀತಾಜಿ ವಿವರಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಶಿವ ಸಹಕಾರಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ರಾಜಶೇಖರ್, ನಿವೃತ್ತ ಶಿಕ್ಷಕ ಹೆಚ್.ಎಂ. ಶಂಕರಯ್ಯ, ಲೆಕ್ಕಪರಿಶೋಧಕ ಭೀಷ್ಮಣ್ಣ, ಶ್ರೀಮತಿ ಯಶೋಧ, ಶ್ರೀಮತಿ ಸವಿತಾ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ ಬೆಳಗಾವಿ ಅಧಿವೇಶನದ ಒಳ - ಹೊರಗೆ ಹೋರಾಟ

ದಾವಣಗೆರೆ, ಡಿ.2- ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಹಾಗೂ ಬರ ನಿರ್ವಹಣೆಯಲ್ಲಿ ವಿಫಲವಾಗಿರುವುದನ್ನು ಖಂಡಿಸಿ ಬಿಜೆಪಿ ಹಾಗೂ ಜೆಡಿಎಸ್ ಎರಡೂ ಪಕ್ಷಗಳು ಸೇರಿ ಬೆಳಗಾವಿ ಅಧಿವೇಶನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡಲಾಗುವುದು ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ನೀಡುವಲ್ಲಿ ಸಂಪೂರ್ಣ ಸರ್ಕಾರ ವಿಫಲವಾಗಿದೆ. ಗೃಹಲಕ್ಷ್ಮಿ ಹಣ ಎಲ್ಲ ಮಹಿಳೆಯರ ಖಾತೆಗೆ ತಲುಪಿಲ್ಲ. ಗೃಹಜ್ಯೋತಿ ಯೋಜನೆ ಮಾಡಿ 200 ಯೂನಿಟ್ ಉಚಿತವೆಂದು ಹೇಳಿ ಇನ್ನೊಂದೆಡೆ ದರ ಹೆಚ್ಚಿಸಿದ್ದಾರೆ. ವಿದ್ಯುತ್ ಸಮರ್ಪಕವಾಗಿ ಕೊಡುತ್ತಿಲ್ಲ. ಮದ್ಯದ ದರವಂತೂ ವಿಪರೀತ ಹೆಚ್ಚಳ ಮಾಡಿದೆ. ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದರು.

ಲೋಕಸಭೆ ಚುನಾವಣೆ ಬಳಿಕ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ. ಸರ್ಕಾರ ಉರುಳಿಸಲು ನಾವು ಆಪರೇಷನ್ ಕಮಲ ಮಾಡುವುದಿಲ್ಲ. ಕಾಂಗ್ರೆಸ್ ಶಾಸಕರೇ ಬೇಸತ್ತು ರಾಜೀನಾಮೆ ನೀಡಿ ಸರ್ಕಾರದ ಪತನಕ್ಕೆ ಕಾರಣರಾಗಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರೇಳು ತಿಂಗಳು ಕಳೆದರೂ ಇನ್ನೂ ಸರ್ಕಾರ ಟೇಕಾಫ್ ಆಗಿಲ್ಲ. ಇದನ್ನೆಲ್ಲಾ ನೋಡಿದರೆ ಸರ್ಕಾರ ಬಹಳ ದಿನ ಉಳಿಯುವುದಿಲ್ಲ ಎಂದರು.

ರಾಜ್ಯದಲ್ಲಿ ಭೀಕರ ಬರಗಾಲವಿದ್ದು ಜನರು ಸಂಕಷ್ಟದಲ್ಲಿದ್ದಾರೆ. ಇಂಥ ಸಂದರ್ಭದಲ್ಲಿಯೂ ಕಾಂಗ್ರೆಸ್ ಸರ್ಕಾರದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ನಿಗಮ ಅಧ್ಯಕ್ಷ ಸ್ಥಾನಕ್ಕಾಗಿ ಕಚ್ಚಾಟ ನಡೆದಿದೆ. ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಆಗುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರೇ ಬೇಸತ್ತು ಪತ್ರ ಬರೆಯುತ್ತಿದ್ದಾರೆ ಎಂದರು.

ಆಡಳಿತ ಪಕ್ಷದಲ್ಲಿರುವ ಡಿಸಿಎಂ ಹಾಗೂ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಸೇರಿದಂತೆ ಸರ್ಕಾರದ ಸಚಿವರೇ ವಿರೋಧ ಮಾಡಿದ್ದಾರೆ. ನ್ಯಾ.ಕಾಂತರಾಜು ವರದಿ ಸರಿಯಿಲ್ಲ. ಯಾರ ಮನೆಗೂ ಹೋಗಿ ಸಮೀಕ್ಷೆ ಮಾಡಿಲ್ಲ. ಇದು ಅವೈಜ್ಞಾನಿಕ. ಸರಿಯಾದ ರೀತಿ ಸಮೀಕ್ಷೆ ಮಾಡಿ ಅದರ ಆಧಾರದಲ್ಲಿ ವರದಿ ನೀಡಬೇಕು ಎಂದರು.

ಜಮೀರ್ ಅಹಮದ್ ಸಭಾಪತಿ ಹುದ್ದೆಗೆ ಅವರು ಅಪಮಾನ ಮಾಡಿದ್ದಾರೆ. ಜಮೀರ್ ಅಹಮದ್ ಹೇಳಿಕೆ ಖಂಡನೀಯ. ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಅಧಿಕಾರಕ್ಕೆ ಬರಲಿದೆ. ತೆಲಂಗಾಣ ಹಾಗೂ ಮಿಜೋರಾಂನಲ್ಲಿ ಪೈಪೋಟಿ ನೀಡಿದೆ ಎಂದರು.

ಕೆ.ಪಿ. ಕಲ್ಲಿಂಗಪ್ಪ, ಪಿ.ಎಸ್. ರಾಜು, ಜಯರುದ್ರೇಶ್, ಬಸವರಾಜ್, ವೆಂಕಟೇಶ್, ಮಂಜುನಾಥ್, ಅಣಜಿ ಬಸವರಾಜ್, ಹನುಮಂತಪ್ಪ ಪತ್ರಿಕಾಗೋಷ್ಠಿಯಲ್ಲಿದ್ದರು.



**ನಾನು ಲೋಕಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿ ಎಂದು ಪದೇ ಪದೇ ನಾನೇ ಹೇಳಿಕೊಂಡರೆ ಅದು ನನ್ನ ವರ್ಚಸ್ಸಿಗೆ ಕುಂದು ಬರುತ್ತದೆ. ಆದ್ದರಿಂದ ಪಕ್ಷವು ಯಾರಿಗೆ ಟಿಕೆಟ್ ಕೊಡಬೇಕು ಎಂಬ ಬಗ್ಗೆ ಸಮೀಕ್ಷೆ ಮಾಡಿ ನಿರ್ಧಾರ ಕೈಗೊಳ್ಳಲಿ.**

**- ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ**

## ಮಲೇಬೆನ್ನೂರಿನಲ್ಲಿ ಇಂದು ಕನಕದಾಸರ ಜಯಂತಿ



ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಸಂಘದಿಂದ ದಾಸಶ್ರೇಷ್ಠ ಭಕ್ತ ಕನಕದಾಸರ 536ನೇ ಜಯಂತ್ಯೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 12 ರಿಂದ 3 ರವರೆಗೆ ಹೊರಬೀರಪ್ಪನ ಗುಡಿ ಹತ್ತಿರ ಅನ್ನಸಂತರ್ಪಣೆ ಮತ್ತು ಮಧ್ಯಾಹ್ನ 3ಕ್ಕೆ ಪಟ್ಟಣದಲ್ಲಿ ಕನಕದಾಸರ ಪತ್ರಿಮೆಯ ಶೋಭಾಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೆ.ಪಿ.ಗಂಗಾಧರ್, ಪಿ.ಹೆಚ್.ಶಿವಕುಮಾರ್, ಪಿ.ಆರ್.ರಾಜು ತಿಳಿಸಿದ್ದಾರೆ.

## ನಗರದಲ್ಲಿ ಇಂದು 'ತಾರೆ ನೀ ಮಿನುಗು' ರಾಜ್ಯಮಟ್ಟದ ಸೌಂದರ್ಯ ಸ್ಪರ್ಧೆ

ದಾವಣಗೆರೆ, ಡಿ. 2- ಕೆಬಿಜೆ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ನಾಳೆ ದಿನಾಂಕ 3 ರ ಭಾನುವಾರ ಬೆಳಿಗ್ಗೆ 10 ಕ್ಕೆ ಪಂಜುರ್ಲಿ ಹೋಟೆಲ್‌ನಲ್ಲಿ 'ತಾರೆ ನೀ ಮಿನುಗು' ಎಂಬ ರಾಜ್ಯಮಟ್ಟದ ಸೌಂದರ್ಯ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಮೇಘನಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

## ಇಂದು ಎಲೆಕ್ಟ್ರಿಕ್ ವಾಹನಗಳ ರ್‍ಯಾಲಿ

ದಾವಣಗೆರೆ, ಡಿ.2- ದಾವಣಗೆರೆ ರೌಂಡ್ ಟೇಬಲ್ -76 ವತಿಯಿಂದ ಪರಿಸರ ಜಾಗೃತಿಗಾಗಿ ನಾಳೆ ದಿನಾಂಕ 3ರ ಭಾನುವಾರ ಬೆಳಿಗ್ಗೆ 10ರಿಂದ 12 ರವರೆಗೆ ಎಲೆಕ್ಟ್ರಿಕ್ ವಾಹನಗಳ ರ್‍ಯಾಲಿ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಅಭಿಷೇಕ್. ಶೇಟ್ ತಿಳಿಸಿದ್ದಾರೆ. ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರ್‍ಯಾಲಿಯು ನಗರದ ಹೈಸ್ಕೂಲ್ ಮೈದಾನದಿಂದ ಆರಂಭಗೊಳ್ಳಲಿದೆ ಎಂದರು. ಶಂಕರ್‌ಮೂರ್ತಿ, ಸುಹಾಸ್ ದತ್ತಾತ್ರೇಯ, ಎನ್. ಸುಹಾಸ್, ಆದಿತ್ಯ, ಮಾಧುರಿ ಸುಹಾಸ್, ತೇಜಸ್ವಿನಿ ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಟೆನ್ನಿಸ್ ಕ್ರೀಡೆ ಹಬ್ಬ



ದಾವಣಗೆರೆ, ಡಿ.2- ಇನ್ವಿಟೇಷನ್ ಕಪ್ ಟೆನಿಸ್ ಟೂರ್ನಮೆಂಟ್‌ನವರು ಮಕ್ಕಳಿಗಾಗಿ ಏರ್ಪಡಿಸಿದ್ದ ಟೆನಿಸ್ ಸ್ಪರ್ಧೆ ಬಾಲಕ, ಬಾಲಕಿಯರಿಗಾಗಿ ತಲಾ ನಾಲ್ಕು ಕಪ್ ವಿತರಿಸಲಿದ್ದು, ಶಿವಮೊಗ್ಗ, ಬೆಂಗಳೂರು, ಮಂಡ್ಯ, ಮೈಸೂರು, ಬಾಗಲಕೋಟೆ ಹುಬ್ಬಳ್ಳಿ, ಬಿಜಾಪುರ, ದಾವಣಗೆರೆ ಜಿಲ್ಲೆಗಳ ನೂರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿರುವರು. ಈ ಪಂದ್ಯವನ್ನು ಜಿಲ್ಲಾ ಟೆನಿಸ್ ಅಸೋಸಿಯೇಷನ್ ಅಧ್ಯಕ್ಷ ಡಾ. ಎಸ್. ಎಂ. ಬ್ಯಾಡಗಿ ಅವರು ಇಂದು ಉದ್ಘಾಟಿಸಿದರು.

ಕಾರ್ಯದರ್ಶಿ ಎಸ್.ಎಂ. ಸಮಂತ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ದಾವಣಗೆರೆ ಟೆನಿಸ್ ಅಕಾಡೆಮಿಯವರಿಂದ ನಡೆಯುತ್ತಿರುವ ಈ 13ನೇ ವಾರ್ಷಿಕೋತ್ಸವ ಟೂರ್ನಮೆಂಟ್ ಇಂದು ಮುಕ್ತಾಯಗೊಳ್ಳಲಿದ್ದು, ಸಾರ್ವಜನಿಕರು ಉಚಿತವಾಗಿ ವೀಕ್ಷಿಸಿಬಹುದು. ಅದೇ ರೀತಿ ವಯಸ್ಕರ ಟೆನಿಸ್ ಕಪ್ ಪಂದ್ಯವನ್ನು ಇದೇ ದಿನಾಂಕ 8, 9, 10ರಂದು ಟೆನಿಸ್ ಅಕಾಡೆಮಿಯಲ್ಲಿಯೇ ನಡೆಸಲಾಗುವುದು. ಆಸಕ್ತರು ಭಾಗವಹಿಸಬಹುದೆಂದು ಟೆನಿಸ್ ಟೂರ್ನಮೆಂಟ್ ಸಹಕಾರ್ಯದರ್ಶಿ ರಘುನಂದನ್ ಅಂಬರ್‌ಕರ್ ತಿಳಿಸಿದರು.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಇಂದು ಬೆಳಿಗ್ಗೆ 11 ರಿಂದ 1 ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ನಡೆಯಲಿದೆ. ವಿವರಗಳಿಗೆ ಸಂಪರ್ಕಿಸುವ ದೂರವಾಣಿ 6363151534.

ಶಿಬಿರದಲ್ಲಿ ಭಾಗವಹಿಸುವ ತಪಾಸಣಾ ತಂಡ: ಡಾ.ಮಾವಿಶೆಟ್ಟರ್, ಡಾ. ಶರತ್‌ರಾಜ್. ಕೆ.ಆರ್, ಡಾ.ಸಿ.ಎನ್.ಕೋಟಿಹಾಳ್, ಡಾ.ಎ.ಎನ್.ಸುಂದರೇಶ್ ಡಾ.ಆರತಿ ಸುಂದರೇಶ್, ಡಾ.ಜಿ.ಎಸ್.ಗಿರೀಶ್, ಡಾ.ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್.ರಂಗರಾಜನ್.

## ಇಂದು ಆರೋಗ್ಯ ತಪಾಸಣಾ ಶಿಬಿರ

ಜೈ ಭಜರಂಗಿ ಸ್ನೇಹ ಬಳಗದ ವತಿಯಿಂದ ವೆಲ್‌ನೆಸ್ ಫರ್‌ಎವರ್ ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ 2ನೇ ವರ್ಷದ ಉಚಿತ ಆರೋಗ್ಯ ತಪಾಸಣಾ ಶಿಬಿರ ವಿದ್ಯಾನಗರದ 1ನೇ ಬಸ್ ಸ್ಟಾಪ್ ಗಾಂಧಿ ಪ್ರತಿಮೆ ಬಳಿ ಇಂದು ನಡೆಯಲಿದೆ.

# ಪೊಲೀಸರ ಕರ್ತವ್ಯ ಲೋಪದ ವಿರುದ್ಧ ಲೋಕ ಸ್ಪಂದನಾ ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ, ದೂರು ದಾಖಲಿಸಲು ಅವಕಾಶ

ಜಗಳೂರು, ಡಿ.2- ಪೊಲೀಸರ ಕರ್ತವ್ಯ ಲೋಪದ ಬಗ್ಗೆ ಲೋಕಸ್ಪಂದನಾ ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ದೂರು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ಮಹಿಳೆಯರ ರಕ್ಷಣೆ, ವಿದ್ಯಾರ್ಥಿಗಳಿಗೆ ಭದ್ರತೆ, ಟ್ರ್ಯಾಫಿಕ್ ಸಮಸ್ಯೆ, ಸಿಗ್ನಲ್ ಅಳವಡಿಕೆ, ಕಾಲೇಜು ರಸ್ತೆಗಳಲ್ಲಿ ಕರ್ಕಶ ಶಬ್ಧ ಸಂಚಾರ, ಬೀದಿ ಬದಿ ವ್ಯಾಪಾರಿಗಳಿಗೆ ಪೊಲೀಸರಿಂದ ಆಗುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಿಮ್ಮ ಗಂಭೀರ ಸಲಹೆ ಮತ್ತು ದೂರುಗಳನ್ನು ಶೀಘ್ರವೇ ಬಗೆಹರಿಸುತ್ತೇವೆ ಎಂದರು.

**ವರದಿ ಆಧಾರದ ಮೇಲೆ ಕ್ರಮ:** ಠಾಣೆಗೆ ಬಂದ ವಕೀಲರನ್ನು ಕಕ್ಷಿದಾರರ ಎದುರು ಅವಾಚ್ಯ ಶಬ್ಧಗಳಿಂದ ನಿಂದಿಸಿದ ಪಟ್ಟಣದ ಠಾಣೆ ಇನ್ಸ್‌ಪೆಕ್ಟರ್ ಎಂ. ಶ್ರೀನಿವಾಸ್‌ರಾವ್ ಅವರನ್ನು ತಕ್ಷಣವೇ ಅಮಾನತ್ತು ಮಾಡಬೇಕು ಎಂಬ ವಕೀಲರ ಮನವಿಗೆ ವಿಚಾರಣಾ ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಕೀಲರ ಸಲಹೆಗಳನ್ನು ಇಲಾಖೆ ಪ್ರಾಮಾಣಿಕವಾಗಿ ಸ್ವೀಕರಿಸುತ್ತದೆ. ಉತ್ತಮ ಸಮಾಜ ಕಟ್ಟಬೇಕಾದರೆ ವಕೀಲರು ಸೇರಿದಂತೆ, ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದರು.

ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಓಂಕಾರೇಶ್ವರ್ ಮಾತನಾಡಿ, ಸಾರ್ವಜನಿಕ ಸೊತ್ತಾದ ಠಾಣೆಯಲ್ಲಿ ಯಾರನ್ನೂ ಅಗೌರವದಿಂದ ನಡೆಸಿಕೊಳ್ಳಬಾರದು. ದೂರು ಕೊಡಲು ಬಂದವರನ್ನು ಗೌರವದಿಂದ ನಡೆಸಿಕೊಳ್ಳುವುದು ಠಾಣಾಧಿಕಾರಿಗಳ ಕರ್ತವ್ಯ. ಆದರೆ ಪಿಐ ಶ್ರೀನಿವಾಸ್‌ರಾವ್ ವಕೀಲರಿಗೆ ಅಗೌರವ ತೋರಿದ್ದಾರೆ. ಠಾಣೆಗೆ ಬಂದವರನ್ನು ಮರ್ಯಾದೆಯಿಂದ ನಡೆಸಿಕೊಳ್ಳುವುದಿಲ್ಲ ಎಂದು ಸಭೆಯಲ್ಲಿ ಎಸ್ಪಿಯ ಗಮನಕ್ಕೆ ತಂದರು.

**ಸಾರ್ವಜನಿಕರಿಂದ ಬಂದ ಸಲಹೆಗಳು;** ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಟ್ರ್ಯಾಫಿಕ್ ಸಮಸ್ಯೆ ಹೆಚ್ಚುತ್ತಿದೆ. ಟ್ರಾಫಿಕ್ ಪೊಲೀಸರೇ ಇಲ್ಲ. ರಸ್ತೆಯ ಎರಡೂ ಬದಿಯಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ರಾಮಾಲಯ ರಸ್ತೆಯನ್ನು ಒನ್ ವೇ ಮಾಡಿ ಎಂದು ಪಪಂ ಸದಸ್ಯ ಆರ್.ತಿಪ್ಪೇಸ್ವಾಮಿ ಸಲಹೆ ನೀಡಿದರು.

ಡಿ.ಎಸ್.ಎಸ್. ಸಂಚಾಲಕ ಸತೀಶ್, ಚಿಕ್ಕ ಉಜ್ಜಿನಿ ಗ್ರಾಮದಲ್ಲಿ ದಲಿತ ಮಹಿಳೆಯ ಮೇಲೆ ಅವಾಚ್ಯ ಶಬ್ದ ನಿಂದನೆ ಪ್ರಕರಣಕ್ಕೆ ಮೂರು ವರ್ಷಗಳಾದರೂ ನ್ಯಾಯ ಸಿಕ್ಕಿಲ್ಲ ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ಕಾನನಕಟ್ಟೆ ಪ್ರಭು, ಜಾತಿ ನಿಂದನೆ ಪ್ರಕರಣಗಳನ್ನು ದಾಖಲಿಸುವ ಮುನ್ನ ಪೊಲೀಸರು ಗ್ರಾಮದ ಹಿರಿಯರನ್ನು ಕರೆಸಿ ಕೂಲಂಕುಶವಾಗಿ ಪರಿಶೀಲಿಸಿ ಕೇಸ್ ದಾಖಲಿಸಲಿ. ಸಾಮಾನ್ಯ ಜನರಿಗೆ ನ್ಯಾಯ ಸಿಗಬೇಕು. ಎಂದರು.

ಗುರುಸಿದ್ದಾಪುರ ಗ್ರಾಮದ ಶಿವಮೂರ್ತಿ, 40 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಉಳುಮೆ ಮಾಡಿಕೊಳ್ಳುತ್ತಿದ್ದು ಮಾಗಡಿ ಗ್ರಾಮದವರು ಉಳುಮೆಗೆ ಬಿಡುತ್ತಿಲ್ಲ. ಎಲ್ಲ ದಾಖಲಾತಿಗಳು ಇದ್ದರೂ ಅಡ್ಡಿ ಪಡಿಸುತ್ತಿದ್ದಾರೆ. ನನಗೆ ನ್ಯಾಯ ಕೊಡಿ ಎಂದು ಕೋರಿಕೊಂಡರು. ಗ್ಯಾಸ್ ಓಬಪ್ಪ, ಸಾಮಾಜಿಕ ಜಾಗೃತಿ, ಟ್ರ್ಯಾಫಿಕ್ ಸಮಸ್ಯೆ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಜನ ಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಸಿಬ್ಬಂದಿ ಹೆಚ್ಚಿಸಿ ಎಂದು ಮನವಿ ಮಾಡಿಕೊಂಡರು.

ಆರ್.ಟಿ.ಐ. ಕಾರ್ಯಕರ್ತ ವಿನಯ್, ಕ್ಯಾಸೇನಹಳ್ಳಿ ಗ್ರಾಮದ ಸತ್ಯಪ್ಪ, ಪ.ಪಂ ಸದಸ್ಯೆ ಮಂಜಮ್ಮ ಸೇರಿದಂತೆ ಇತರರು ಪಟ್ಟಣದ ಅನೇಕ ಸಮಸ್ಯೆಗಳ ಬಗ್ಗೆ ದೂರು ನೀಡಿದರು.

ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಬಿ.ಎಸ್.ಬಸವರಾಜ್, ಪ.ಪಂ.ಮುಖ್ಯಾಧಿಕಾರಿ ಲೋಕ್ಯಾನಾಯ್ಕ್, ಇನ್‌ಸ್ಪೆಕ್ಟರ್ ಶ್ರೀನಿವಾಸ್‌ರಾವ್, ಪಿಎಸ್‌ಐ ಗಳಾದ ಡಿ.ಎಸ್.ಸಾಗರ್ ಸೇರಿದಂತೆ ಇತರರು ಭಾಗವಹಿಸಿದ್ದರು.



**ಜಗಳೂರಿನ ಜನ ಸಂಪರ್ಕ ಸಭೆಯಲ್ಲಿ ಅಹವಾಲು ಸ್ವೀಕರಿಸಿದ ಎಸ್ಪಿ ಉಮಾ ಪ್ರಶಾಂತ್**

## ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ 60 ರ ಸಂಭ್ರಮದ ಸಮಾರೋಪ

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಹಾಗೂ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಗಳ 60 ರ ಸಂಭ್ರಮದ 3ನೇ ದಿನ ಕಾರ್ಯಕ್ರಮವು ಇಂದು ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲಾ ಆವರಣದಲ್ಲಿ ನಡೆಯಲಿದೆ.

**ನಗರದಲ್ಲಿ ಇಂದು**

ಬೆಳಿಗ್ಗೆ 10.30 ಕ್ಕೆ ಇಂದಿನ ಶಿಕ್ಷಣ ವ್ಯವಸ್ಥೆ - ಮೌಲ್ಯ ಪ್ರತಿಪಾದನೆ ವಿಷಯ ಕುರಿತು ವಿಚಾರ ಸಂಕಿರಣ ನಡೆಯುವುದು. ಅಧ್ಯಕ್ಷತೆಯನ್ನು ಬಸವರಾಜಪ್ಪ ಬೆಳಗಾವಿ ವಹಿಸುವರು. ವಿಷಯ ಮಂಡನೆ : ಡಾ. ವಾಮದೇವಪ್ಪ ಹೆಚ್.ವಿ., ಭಾಗವಹಿಸುವವರು : ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಾದ ಮಹಿಮಾ ಪಟೇಲ್, ಡಾ. ಶಿವಕುಮಾರ್ ಹೆಚ್.ಬಿ., ಮಲ್ಲೇಶ್ ಬಿ.ಎನ್., ಉಮಾಪತಯ್ಯ ಟಿ.ಎಂ., ಶ್ರೀಮತಿ ಸುಜಾತ ಕೆ.ವಿ. ನಂತರ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಗೌರವಾರ್ಪಣೆ ನಡೆಯುವುದು.

ಸಂಜೆ 5 ಕ್ಕೆ ಸಮಾರೋಪ ಸಮಾರಂಭ ನಡೆಯುವುದು. ಕೂಡಲ ಸಂಗಮದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ಮುರುಗೇಂದ್ರ ವಿ. ಚಿಗಟೇರಿ ವಹಿಸುವರು. ಮುಖ್ಯ ಅತಿಥಿಗಳಾಗಿ ಹೆಚ್.ಎಸ್. ಶಿವಶಂಕರ್, ಅಜಯ್‌ಕುಮಾರ್, ಶ್ರೀಮತಿ ಮೀನಾಕ್ಷಿ, ಶ್ರೀನಿವಾಸ ದಾಸಕರಿಯಪ್ಪ ಆಗಮಿಸುವರು.


**ಸ್ಕೂಬಿ (ನಾಯಿ) ಕಳೆದಿದೆ**



ದಿ. 29.11.2023 ರ ಸಂಜೆ 8.30ಕ್ಕೆ ಸ್ಕೂಬಿ (ನಾಯಿ) ಕಳೆದಿದೆ. ಸಿಕ್ಕವರು ತಂದುಕೊಟ್ಟಲ್ಲಿ ಸೂಕ್ತ ಬಹುಮಾನ ನೀಡಲಾಗುವುದು. ಸಂಪರ್ಕಿಸಿ :

94484 15109, 73488 27079

**RINKUS COOKING CLASSES**



Rinku's cooking classes are simply the best in Davangere!

*Her expertise and passion, awarded by the renowned **chef Sanjeev Kapoor,** made the experience exceptional.*

*Rinku's clear instructions, personalised tips, and infectious enthusiasm create a fun and educational atmosphere. Highly recommend her classes for anyone eager to enhance their culinary skills.*

*Your student .... Sirisha*

Rinkus cooking classes follow on insta and facebook

M.No.7019653008

**KJS ಸುವರ್ಣಾವಕಾಶ**

ನಗರ/ಗ್ರಾಮೀಣ ಪ್ರದೇಶದ ಪದವೀಧರ ಯುವಕ-ಯುವತಿಯರಿಗೆ ಕುಮಾರ ಜ್ಯೂಯಲರ್ಸ್‌ನಲ್ಲಿ ಕೆಲಸ ಮಾಡಲು ಸುವರ್ಣಾವಕಾಶ. ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಸಕ್ತರು ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.

**ಕುಮಾರ ಜ್ಯೂಯಲರ್ಸ್**

ಮಂಡಿಪೇಟೆ, ದಾವಣಗೆರೆ.

7536 916 916, 99640 88991

**ಬಾಡಿಗೆಗೆ ಇದೆ**

ದಾವಣಗೆರೆ ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್, ಶಾರದಾಂಬಾ ಸರ್ಕಲ್ ಹತ್ತಿರ, ಕುಂದುವಾಡ ಕೆರೆ ರೋಡ್ ಹತ್ತಿರ, (# 3827) 'Bhari Plaza'ದಲ್ಲಿ 25'x65' ಅಳತೆಯ ಎರಡನೇಯ ಮಹಡಿ ಬಾಡಿಗೆಗೆ ಇದೆ.

: ಸಂಪರ್ಕಿಸಿ :

ಮೊ. : 96865 52600

**ಜಮೀನು ಮಾರಾಟಕ್ಕಿದೆ**

ದಾವಣಗೆರೆ ಸಮೀಪ ರಾಷ್ಟ್ರೀಯ ಹೆದ್ದಾರಿ ಹತ್ತಿರ ಕೊಗ್ಗನೂರು ಬಳಿ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :

99000 12266

# ವಿಜಯನಗರ ಜಿಲ್ಲೆಯಲ್ಲಿ ಜ.18 ರಿಂದ ಗ್ರಾಮ ವಾಸ್ತವ್ಯ



ಹರಪನಹಳ್ಳಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಎಸ್ಪಿ ಶ್ರೀಹರಿಬಾಬು

ಹರಪನಹಳ್ಳಿ, ಡಿ. 2- ವಿಜಯನಗರ ಜಿಲ್ಲೆ ಯಲ್ಲಿ 356 ಹಳ್ಳಿಗ ಳಿದ್ದು, ಹಂತ ಹಂತವಾಗಿ ಪ್ರತಿ ತಾಲ್ಲೂಕಿನ ಹಳ್ಳಿ ಗಳಲ್ಲಿ ಗ್ರಾಮ ವಾಸ್ತವ್ಯ ಮಾಡುವ ಮೂಲಕ ಹಳ್ಳಿಗಳಲ್ಲಿ ರುವ ಸಮಸ್ಯೆ ಗಳನ್ನು ಬಗೆಹರಿ ಸುವ ಕಾರ್ಯವನ್ನು ಜನ ವರಿ 18ರಿಂದ ಹಮ್ಮಿಕೊಳ್ಳ ಲಾಗುವುದು ಎಂದು ವಿಜಯನಗರ ಎಸ್ಪಿ ಶ್ರೀಹರಿಬಾಬು ಹೇಳಿದರು. ಪಟ್ಟಣದ ನೂತನ ಪೊಲೀಸ್ ಠಾಣೆಯ ಮುಂಬಾಗ ದಲ್ಲಿ ನೂತನ ಉಧ್ಯಾನವನದಲ್ಲಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯ ಮೊದಲ ಹಂತದಲ್ಲಿ 50 ಹಳ್ಳಿಗಳನ್ನು ಆಯ್ಕೆಮಾಡಿ ಕೊಂಡು, ತಾಲ್ಲೂಕಿನ 10 ಹಳ್ಳಿಗಳಲ್ಲಿ ವಾಸ್ತವ್ಯ ಮಾಡುವ ಮೂಲಕ ಅಲ್ಲಿಯ ಜನರಿಗೆ ಸೈಬರ್ ಕ್ರೈಮ್ ಬಾಲ್ಯವಿವಾಹ, ಪೋಕ್ಸೋ ಕಾಯ್ದೆ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗುವುದು ಎಂದರು.

ಜಿಲ್ಲೆಯಲ್ಲಿ ನೂತನವಾಗಿ 273 ಪೊಲೀಸ್ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಗುರಿ ಇದ್ದು, ಹರಪನಹಳ್ಳಿ ತಾಲ್ಲೂಕಿನ ಹಲವಾಗಲು, ಅರಸಿಕೇರಿ, ಚಿಗಟೇರಿ, ಹರಪನಹಳ್ಳಿಗಳಲ್ಲಿ 90 ವಸತಿ ಗೃಹಗಳನ್ನು ಪೊಲೀಸ್ ವಸತಿ ಗೃಹಗಳ ವತಿಯಿಂದ ಕಟ್ಟಡ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು. ಪಟ್ಟಣದಲ್ಲಿ ಟ್ರಾಫಿಕ್ ಸುಧಾರಣೆ ಬಗ್ಗೆಯೂ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ವೇಳೆ ಸಿಪಿಐ ನಾಗರಾಜ ಕಮ್ಮಾರ ಸೇರಿದಂತೆ ಇತರರಿದ್ದರು.

# ಮನುವಾದಿಗಳಿಂದ ಮಹಿಳಾ ಹಕ್ಕುಗಳ ಕಸಿಯುವ ಪ್ರಯತ್ನ

**ಭಾರತೀಯ ಮಹಿಳಾ ಒಕ್ಕೂಟದ 5ನೇ ರಾಜ್ಯ ಸಮ್ಮೇಳನದಲ್ಲಿ ಭಾರತೀಯ ಮಹಿಳಾ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಸದಸ್ಯೆ ಲತಾ ಭಿಸೆ**



ದಾವಣಗೆರೆ, ಡಿ. 2- ಭಾರತ ಸಂವಿಧಾನ ದೇಶದ ನಾಗರಿಕರಿಗೆ ನೀಡಿದ ಹಕ್ಕುಗಳನ್ನು ಮಹಿಳೆಗೂ ನೀಡಿದೆ. ಆದರೆ ಮನುವಾದಿಗಳು ಅವುಗಳನ್ನು ಕಸಿಯುವ ಪ್ರಯತ್ನ ಮಾಡುತ್ತಿರುವುದು ವಿಷಾದದ ಸಂಗತಿ ಎಂದು ಭಾರತೀಯ ಮಹಿಳಾ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಸದಸ್ಯೆ ಲತಾ ಭಿಸೆ ಹೇಳಿದರು.

ನಗರದ ಜಯದೇವ ವೃತ್ತದ ಬಳಿ ಇರುವ ಶ್ರೀ ನಾಟ್ಯಚಾರ್ಯ ಕುಲಕರ್ಣಿ ರಸ್ತೆಯಲ್ಲಿ ಇಂದು ಹಮ್ಮಿಕೊಂಡಿದ್ದ ಭಾರತೀಯ ಮಹಿಳಾ ಒಕ್ಕೂಟದ ಐದನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ 'ಭಾರತದ ಮಹಿಳಾ ಚಳವಳಿಯ ಸಂಕ್ಷಿಪ್ತ ಚರಿತ್ರೆ' ಪುಸ್ತಕ ಬಿಡುಗಡೆಗೊಳಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯ ರಕ್ಷಣೆಯೇ ಸಂವಿಧಾನದ ರಕ್ಷಣೆ ಆಗಿದೆ. ಮಹಿಳೆ ಕೂಡ ಈ ದೇಶದ ನಾಗರಿಕಳು. ಕೇವಲ ಮನೆ ಕೆಲಸ ಮಾತ್ರವಲ್ಲದೇ, ಇತರೆ ಕಚೇರಿ ಕೆಲಸವನ್ನು ಸಮರ್ಥವಾಗಿ ನಿಭಾಯಿಸಬಲ್ಲಳು. ಆಕೆಗೂ ಕೂಡ ಸಂವಿಧಾನ ಬದ್ಧ ಅಧಿಕಾರ ಸಿಗಬೇಕಾಗಿದೆ ಎಂದು ಪ್ರತಿಪಾದಿಸಿದರು.

ಮಹಿಳೆಗೆ ಸಂವಿಧಾನ ಬದ್ಧ ಅಧಿಕಾರ ದೊರೆಯಬೇಕೆಂಬುದು ಸ್ವಾತಂತ್ರ್ಯ ಸಂಗ್ರಾಮ ಅವಧಿಯ ಕನಸಾಗಿತ್ತು. ಇದಕ್ಕಾಗಿ ಮಹಿಳೆಯರು ನಿರಂತರವಾಗಿ ಹೋರಾಟ ಮಾಡುವ ಅಗತ್ಯ ಇದೆ ಎಂದು ಹೇಳಿದರು.

ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಮಾದರಿಯಲ್ಲಿಯೇ ಇಂದಿನ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ. ಮಹಿಳೆಯರಿಗೆ ಸಂವಿಧಾನ ಬದ್ಧ ಅಧಿಕಾರ ನೀಡುವ ಸರ್ಕಾರವನ್ನು ಮುಂಬರುವ ಚುನಾವಣೆಯಲ್ಲಿ ಆರಿಸಿ ತರಬೇಕಾಗಿದೆ ಎಂದರು.

ಗ್ರಾಮೀಣ ಭಾಗದ ಉದ್ಯೋಗ ಖಾತ್ರಿ ಯೋಜನೆಯಂತೆ ನಗರದ ಪ್ರದೇಶದಲ್ಲೂ ಸಹ ಭಗತ್ ಸಿಂಗ್ ಹೆಸರಿನಲ್ಲಿ ಉದ್ಯೋಗ ಖಾತ್ರಿ ಯೋಜನೆ ರೂಪಿಸಬೇಕೆಂದು ಮಹಿಳಾ ಒಕ್ಕೂಟ ಒತ್ತಾಯಿಸುತ್ತದೆ ಎಂದು ಹೇಳಿದರು.

ದೌರ್ಜನ್ಯ, ಹಿಂಸೆ, ಶೋಷಣೆ ಮುಕ್ತ ಸಮಾಜವಾದದ ಕನಸು ನಮ್ಮ ಹಿರಿಯ ಜೀವಿಗಳದ್ದಾಗಿತ್ತು. ಆದರೆ ಆ ಕನಸು ಇನ್ನೂ ನನಸಾಗಿಲ್ಲ ಎಂದರು.

ದೇಶದಲ್ಲಿ ಧಾನ್ಯಗಳ ಬೆಲೆ ಏರಿರುವುದರಿಂದ ಮಹಿಳಾ ಶಿಕ್ಷಣದ ಮೇಲೂ ದುಷ್ಪರಿಣಾಮ ಬೀರಿದೆ. ಇದರ ವಿರುದ್ಧವೂ ಸಹ ಹೋರಾಟ ನಡೆಯಬೇಕಾಗಿದೆ ಎಂದು ತಿಳಿಸಿದರು.

ಭಾರತೀಯ ಮಹಿಳಾ ಒಕ್ಕೂಟದ ರಾಜ್ಯಾಧ್ಯಕ್ಷೆ ಎ. ಜ್ಯೋತಿ ಮಾತನಾಡಿ, ಮಹಿಳಾ ಚಳವಳಿ ಮೂಲಕ ದೇಶದ ಮಹಿಳೆಯರು ಅನೇಕ ಸೌಲಭ್ಯಗಳನ್ನು ಪಡೆದಿದ್ದಾರೆ. ಮಹಿಳಾ ಪರ ಕಾನೂನುಗಳೂ ಸಹ ಅನುಷ್ಠಾನಗೊಂಡಿವೆ. ಆದರೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕೆಲವು ಬೆಳವಣಿಗೆಗಳಿಂದ ಮಹಿಳೆಯ ಬದುಕಿನ ಮೇಲೆ ಪರಿಣಾಮ ಬೀರಿ ಅವರ ಬದುಕಿನ ಹಕ್ಕುಗಳನ್ನು ಘಾಸಿಗೊಳಿಸಿವೆ ಎಂದರು.

ಮಹಿಳೆಯರು ರಾಜಕೀಯ ಪ್ರಜ್ಞೆಯೊಂದಿಗೆ ಮತ್ತಷ್ಟು ಸಂಘಟನಾತ್ಮಕವಾಗಿ ಮುಂದುವರೆಯಬೇಕಾಗಿದೆ ಎಂದು ಹೇಳಿದರು.

ಹಿರಿಯ ನ್ಯಾಯವಾದಿ ಶ್ರೀಮತಿ ಟಿ.ಎಂ. ಅನ್ನಪೂರ್ಣ ಮಾತನಾಡಿ, ಪೋಕ್ಸೋ ಮಹಿಳೆಯರ ಪರ ಇರುವ ಪ್ರಬಲ ಕಾನೂನು. ಮಹಿಳೆಯರಿಗೆ ಕಾನೂನಿನ ಅರಿವು ಮುಖ್ಯ ಎಂದು ತಿಳಿಸಿದರು.

ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಆವರಗೆರೆ ಚಂದ್ರು, ಖಜಾಂಚಿ ಆನಂದರಾಜ್, ಎಐಕೆಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ವಿ. ಲೋಕೇಶ್, ಕಾರ್ಮಿಕ ಮುಖಂಡರಾದ ರಾಘವೇಂದ್ರ ನಾಯರಿ, ಆವರಗೆರೆ ಹೆಚ್.ಜಿ. ಉಮೇಶ್, ಹೆಚ್.ಎಂ. ಸಂತೋಷ್, ಎಂ. ಜಯಮ್ಮ, ಎಂ.ಬಿ. ಶಾರದಮ್ಮ, ರೇಣುಕ, ಎಸ್.ಎಸ್. ಮಲ್ಲಮ್ಮ, ಮಹೇಶ್ ಕುಮಾರ್, ವೈ. ಮಹಾದೇವಮ್ಮ ಮತ್ತಿತರರು ಪಾಲ್ಗೊಂಡಿದ್ದರು.

# ಸೇನೆ ಸೇರುವ ಬಯಕೆಯನ್ನು ಮಕ್ಕಳಲ್ಲಿ ಜಾಗೃತಗೊಳಿಸಬೇಕು

**ಡಾ. ಪಂ. ಪುಟ್ಟರಾಜ ಸೇವಾ ಸಮಿತಿ, ವಚನಾಮೃತ ಬಳಗದ ಕಾರ್ಯಕ್ರಮದಲ್ಲಿ ಮಾಜಿ ಯೋಧ ಅಶೋಕ್ ಕರೆ**



ದಾವಣಗೆರೆ, ಡಿ. 2- ಡಾ. ಪಂ. ಪುಟ್ಟರಾಜ ಸೇವಾ ಸಮಿತಿ, ಜಿಲ್ಲಾ ಮಹಿಳಾ ಘಟಕ ಮತ್ತು ವಚನಾಮೃತ ಮಹಿಳಾ ಬಳಗದವರಿಂದ ವಿನೋಬನಗರದಲ್ಲಿರುವ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಪ್ರೌಢಶಾಲೆಯಲ್ಲಿ ವಚನ ಶಿಬಿರ, ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು.

ಭಾರತೀಯ ಸೇನೆಯ ಮಾಜಿ ಯೋಧ ಎಂ. ಅಶೋಕ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡುತ್ತಾ, ಮಕ್ಕಳಲ್ಲಿ ಸೇನೆ ಸೇರುವ ಬಯಕೆಯನ್ನು ಜಾಗೃತಿಗೊಳಿಸಿದರು.

ಮುಖ್ಯೋಪಾಧ್ಯಾಯ ಕೆ.ಬಿ. ಪಂಚಾಕ್ಷರಪ್ಪ, ಜಿ.ಎಸ್. ಉಜ್ಜಿನಪ್ಪ ಮಾನತಾಡಿದರು. ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಪಿ.ಬಿ. ವಿನಾಯಕ ಗಾಯನ ಹಾಡಿದರು.

ಶಾಲೆಯ ಹಳೇಯ ವಿದ್ಯಾರ್ಥಿನಿ ಸೌಮ್ಯ ಸತೀಶ್ ಧಾರವಾಡ ಅಧ್ಯಕ್ಷೀಯ ನುಡಿಗಳನ್ನಾಡಿದರು.

ಸಂಚಾಲಕರಾದ ಲತಾ ಕಪಾಳಿ ಸ್ವಾಗತಿಸಿದರು. ಕಾರ್ಯದರ್ಶಿ ಮಮತಾ ನಾಗರಾಜ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘಟನಾ ಕಾರ್ಯದರ್ಶಿ ಸಿ.ಜೆ. ಶಾಂತಾ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಸಹ ಕಾರ್ಯದರ್ಶಿ ಮಧುಮತಿ ಗಿರೀಶ್ ಬಹುಮಾನ ವಿತರಿಸಿದರು. ಸುಜಾತ ಬಸವರಾಜ್ ವಂದಿಸಿದರು. ಉಪಾಧ್ಯಕ್ಷರಾದ ಶ್ರೀಮತಿ ವನಜಾ ಮಹಾಲಿಂಗಯ್ಯ ಕಾರ್ಯಕ್ರಮ ನಿರೂಪಿಸಿದರು.

ದೀಪಾ ದೇವರಾಜ್, ಕವಿತಾ ಕೊಟ್ರಬಸಪ್ಪ, ಸುಜಾತ ಬಸವರಾಜ್, ಪ್ರೇಮ ಬಾಲರಾಜ್, ಉಮಾದೇವಿ ಕಾರ್ಯಕ್ರಮದ ಬಹುಮಾನದ ಪ್ರಾಯೋಜಕರಾಗಿದ್ದರು.

## ರಾಜ್ಯಮಟ್ಟದ ಕ್ರೀಡಾಕೂಟ ಜ್ಯೂಡೋ ವಿಜೇತ



ದಾವಣಗೆರೆ, ಡಿ. 2 - ರಾಮ ನಗರದ ಶಾಂತಿ ನಿಕೇತನ ಪಿಯು ಕಾಲೇಜಿನಲ್ಲಿ ನಡೆದ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕ್ರೀಡಾಕೂಟ ಜ್ಯೂಡೋ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮೋತಿ ವೀರಪ್ಪ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ದೀಪಕ್ ವಿ.ಪಿ. ತೃತೀಯ ಬಹುಮಾನ ಪಡೆದಿದ್ದಾರೆ. ಇವರಿಗೆ ಕೋಚ್ ಗಣೇಶ್ ಅಭಿನಂದಿಸಿದ್ದಾರೆ.

## 10 ರಂದು ನಗರದಲ್ಲಿ ಭಗವದ್ಗೀತೆ ಸ್ಪರ್ಧೆ

ದಾವಣಗೆರೆ, ಡಿ.2- ನಗರದ ಬ್ರಾಹ್ಮಣ ಸಮಾಜ ಸೇವಾ ಸಂಘ ಮಹಿಳಾ ವಿಭಾಗದಿಂದ ಗೀತಾ ಜಯಂತಿ ಅಂಗವಾಗಿ ಭಗವದ್ಗೀತೆ ಸ್ಪರ್ಧೆಯನ್ನು ಇದೇ ದಿನಾಂಕ 10ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯ ವಿವರ : ಅಧ್ಯಾಯ ಹತ್ತರಲ್ಲಿ 'ವಿಭೂತಿ ಯೋಗಃ' 1 ರಿಂದ 6 ವರ್ಷದ ಮಕ್ಕಳಿಗೆ 5 ಶ್ಲೋಕ, 7 ರಿಂದ 12 ವರ್ಷದ ಮಕ್ಕಳಿಗೆ 12 ಶ್ಲೋಕ, 13 ರಿಂದ 18 ವರ್ಷದವರಿಗೆ 25 ಶ್ಲೋಕ ಹೇಳುವ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಶ್ರೀಮತಿ ಅಡಿಗ ತಿಳಿಸಿದ್ದಾರೆ.

ವಿವರಕ್ಕೆ ಚಂದ್ರಶೇಖರ ಅಡಿಗ (9964027146), ಶ್ರೀಮತಿ ನಳಿನಿ ಅಚ್ಯುತ್ (9886058866) ಇವರನ್ನು ಸಂಪರ್ಕಿಸುವುದು.


ಡಾ|| ಸೋಮಶೇಖರ್. ಎಸ್.ಎ.
ಕೀಲು, ಮೂಳೆ ತಜ್ಞರು Rheumatologist
(ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿನಾಂಕ : 06.12.2023 ರ ಬುಧವಾರ
ದಿನಾಂಕ : 07.12.2023 ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಫೋ.: 08192-222292





## ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

# ದುರಾಸೆಯೇ ಭ್ರಷ್ಟಾಚಾರಕ್ಕೆ ಕಾರಣ

ದಾವಣಗೆರೆ, ಡಿ.2 - ಶ್ರೀಮಂತಿಕೆ ಹಾಗೂ ಅಧಿಕಾರಕ್ಕೆ ಮನ್ನಣೆ ನೀಡುತ್ತಿರುವುದೇ ಸಮಾಜದಲ್ಲಿ ಭ್ರಷ್ಟಾಚಾರ ನೆಲೆಗೊಳ್ಳಲು ಕಾರಣವಾಗಿದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಹಾಗೂ ಶ್ರೀ ಜಗದ್ಗುರು ಜಯದೇವ ಮುರುಘ ರಾಜೇಂದ್ರ ಪ್ರೌಢಶಾಲೆಗಳ 60ರ ಸಂಭ್ರಮದ ಪ್ರಯುಕ್ತ ಶನಿವಾರ ನಡೆದ ಸಂಸ್ಥೆಯ ಸಂಸ್ಥಾಪಕರ ದಿನ ಹಾಗೂ ವೀರಭದ್ರಪ್ಪ ಎಂ ಚಿಗಟೇರಿ ಅವರ ಕುರಿತು ಅರುಂಧತಿ ಟಿ. ಸಜ್ಜನ್ ಅವರು ಸಂಪಾದಿಸಿರುವ 'ಧರ್ಮ ಪ್ರಕಾಶದೊಂದು ಕಿರಣ' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನಾವು ಚಿಕ್ಕವರಿದ್ದಾಗ ಜೈಲಿಗೆ ಹೋಗಿ ಬಂದವರಿಗೆ ಸಮಾಜವೇ ಬಹಿಷ್ಕಾರ ಹಾಕುತಿತ್ತು. ಆದರೆ, ಈಗ ಅಕ್ರಮ ಸಂಪಾದನೆ ಮಾಡಿ, ಜೈಲಿಗೆ ಹೋಗಿ ಬಿಡುಗಡೆಯಾದವರನ್ನು ಅದ್ದೂರಿಯಾಗಿ ಸ್ವಾಗತಿಸಲಾಗುತ್ತಿದೆ ಎಂದವರು ವಿಷಾದಿಸಿದರು.

ಮನುಷ್ಯನಲ್ಲಿರುವ ದುರಾಸೆಯೇ ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಆದ್ದರಿಂದ ಮಕ್ಕಳಲ್ಲಿ ಸಂತೃಪ್ತಿಯ ಗುಣ ಬೆಳೆಸುವ ನೀತಿ ಪಾಠ ಹೇಳಿಕೊಡಬೇಕಾಗಿದೆ. ಇದರ ಜತೆಗೆ ಮಾನವೀಯತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಚಿಗಟೇರಿ ಕುಟುಂಬದವರು ಸಮಾಜಕ್ಕೆ ಮಾಡಿದ ಸೇವೆ ಅನನ್ಯ. ಇಂಥ ಕುಟುಂಬಗಳ ಸಂಖ್ಯೆ ಹೆಚ್ಚಾಗಬೇಕು. ಸಮಾಜದಲ್ಲಿ ಶಾಂತಿ, ಸಹಬಾಳ್ವೆ ನೆಲೆಗೊಳಿಸುವ ಕೆಲಸಕ್ಕೆ ಚಿಗಟೇರಿ ಕುಟುಂಬ ಶ್ರಮಿಸುತ್ತಿದೆ ಎಂದರು.

ಹಿರಿಯ ವ್ಯಂಗ್ಯಚಿತ್ರಕಾರ ಹೆಚ್.ಬಿ. ಮಂಜುನಾಥ್ ಮಾತನಾಡಿ, ಶಾಲೆಗಳಲ್ಲಿ ಜೀವನದ ಪರೀಕ್ಷೆ ಹೇಗೆ ಎದುರಿಸಬೇಕು. ನಮ್ಮ ಮುಂದಿರುವ ಸವಾಲುಗಳನ್ನು ಎದುರಿಸುವ ಬಗ್ಗೆ ಹೇಳಿಕೊಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂಸ್ಥೆಯ ಸದಸ್ಯರಾದ ಸುವರ್ಣ ನಾಗೇಶ್ ಕವಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಗೌರವಾಧ್ಯಕ್ಷ ವೀರಣ್ಣ ವಿ. ಚಿಗಟೇರಿ, ಕೃತಿಯ ಕರ್ತೃ ಅರುಂಧತಿ ಟಿ. ಸಜ್ಜನ್, ಡಾ. ಚಿನ್ಮಯ್ ಜೆ. ಚಿಗಟೇರಿ ಮತ್ತಿತರರು ಉಪಸ್ಥಿತರಿದ್ದರು. ಜಯವಿಭವ ವಿದ್ಯಾಸಂಸ್ಥೆ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ಸ್ವಾಗತಿಸಿದರು. ಸಹ ಕಾರ್ಯದರ್ಶಿ ಸೌಮ್ಯ ಬಸವರಾಜ್ ನಿರೂಪಿಸಿದರು. ಎಂ.ಕೆ. ನವೀನ್ ವಂದಿಸಿದರು.


ಪ್ರಥಮ ಪುಣ್ಯಸ್ಮರಣೆ



ನಿಧನ : 03.12.2022
ದಿ. ಕಂಚಿಕೇರಿ ಪರಶುರಾಮರಾವ್ (ಹೋವಳೆ)
(ದಿ. ಕಂಚಿಕೇರಿ ತುಕಾರಾಮರಾವ್ ಇವರ ಹಿರಿಯ ಪುತ್ರ)
ನೀವು ನಮ್ಮನ್ನಗಲಿ ಇಂದಿಗೆ (ದಿ. 03.12.2023) ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.
ದುಃಖತಪ್ತ ಕುಟುಂಬ ವರ್ಗ :
- ಪತ್ನಿ : ಅನಿತಾ ಪರಶುರಾಮರಾವ್ ಹಾಗೂ ಪುತ್ರ, ಪುತ್ರಿಯರು, ಅಳಿಯಂದಿರು, ಮೊಮ್ಮಗಳು
- ಸಹೋದರರು, ಸಹೋದರಿಯರು, ಸೊಸೆಯಂದಿರು ಮತ್ತು ಅಳಿಯಂದಿರು ಹಾಗೂ ಅಪಾರ ಬಂಧು-ಬಳಗ,ಮಿತ್ರರು.
- ಗಣೇಶ ಪೇಪರ್ ಮಾರ್ಟ್, ಗಡಿಯಾರ ಕಂಬದ ಹತ್ತಿರ, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ-1. 97430 05155, 99029 98714



ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,
#165/1-2, 3ನೇ ಮೇನ್, ಶ್ರೀ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ
ಕರ್ನಾಟಕ ರಾಜ್ಯ ಸರ್ಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಆರ್.ಜಿ. ಶ್ರೀನಿವಾಸಮೂರ್ತಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.





ಅಖಿಲ ಭಾರತ ಸಹಕಾರ ಸಪ್ತಾಹದ 70ನೇ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಸಿದ್ದರಾಮಯ್ಯನವರು, ಸಹಕಾರ ಮಂತ್ರಿಗಳಾದ ಮಾನ್ಯ ಶ್ರೀ ಕೆ.ಎನ್. ರಾಜಣ್ಣ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು ಮಾನ್ಯ ಶ್ರೀ ಎಂ.ಬಿ. ಪಾಟೀಲ್, ಮಾನ್ಯ ಶ್ರೀ ಜೈಕರ್ ಶೆಟ್ಟಿ ಇಂದ್ರಾಳಿ ಉಡುಪಿ, ಇವರುಗಳಿಂದ ದಿನಾಂಕ 20.11.2023 ರಂದು ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪ್ರತಿಷ್ಠಿತ 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಾದ ನಮ್ಮ ಸಮಾಜದ ಗಣ್ಯರು, ಸಹಕಾರಿಗಳು, ವಾಣಿಜ್ಯೋದ್ಯಮಿಗಳು, ಕೈಗಾರಿಕೋದ್ಯಮಿಗಳು, ಧಾರ್ಮಿಕ ಧುರೀಣರು, ದಾನಿಗಳು ಶ್ರೀ ಕನ್ನಿಕಾ ಪರಮೇಶ್ವರಿ ಬ್ಯಾಂಕ್‌ನ ಅಧ್ಯಕ್ಷರು ಆದ ಸಹಕಾರ ರತ್ನ ಆರ್.ಜಿ. ಶ್ರೀನಿವಾಸಮೂರ್ತಿ ಇವರಿಗೆ ಹೃದಯಪೂರ್ವಕ ಅಭಿನಂದನೆಗಳನ್ನು ಕೋರುವವರು
ಶ್ರೀ ಕನ್ನಿಕಾಪರಮೇಶ್ವರಿ ಕೊ-ಆಪ್. ಬ್ಯಾಂಕ್, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರು, ಷೇರುದಾರರು ಹಾಗೂ ಸಿಬ್ಬಂದಿ ವರ್ಗ ಮತ್ತು ಆರ್ಯವೈಶ್ಯ ಸಮಾಜದ ಸರ್ವ ಸದಸ್ಯರು.
:: ಆಡಳಿತ ಮಂಡಳಿ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗು ನಿರ್ದೇಶಕರುಗಳು ::
* ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಬೆಂಗಳೂರು * ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾ, ಬೆಂಗಳೂರು * ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ (ರಿ.), ದಾವಣಗೆರೆ
* ದಾವಣಗೆರೆ ಜಿಲ್ಲಾ ಆರ್ಯವೈಶ್ಯ ಸಮಿತಿ * ಶ್ರೀ ಕನ್ನಿಕಾಪರಮೇಶ್ವರಿ ಡೈಮಂಡ್ ಜುಬಿಲಿ ವಿದ್ಯಾಪೀಠ, ದಾವಣಗೆರೆ * ವಾಸವಿ ಯುವಜನ ಸಂಘ (ರಿ.), ದಾವಣಗೆರೆ
* ವಾಸವಿ ಮಹಿಳಾ ಸಂಘ (ರಿ.) * ವಾಸವಿ ಯುವತಿಯರ ಸಂಘ, ದಾವಣಗೆರೆ * ವಾಸವಿ ಭಜನಾ ಮಂಡಳಿ, ದಾವಣಗೆರೆ

